DOP 15th of every month from Udupi HPO
ಬೆಲೆ ರೂ.2.50

ದಶಮಾನೋತ್ಸವ ಸಂಭ್ರಮ

# ಶ್ರೀ ಶಾರದಾ


ಮಾಸಪತ್ರಿಕೆ – 15 ಮಾರ್ಚ್ 2010

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893


Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-10 ಸಂಚಿಕೆ-3 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011.



''ಶ್ರೀಸುಬ್ರಹ್ಮಣ್ಯ ಸಭೆ'ಯ ಕಿರುಪ್ರವಾಸ
- ಶ್ರೀಮತಿ ಸ್ನೇಹಲತಾ ದಿವಾಕರ್
ಪುಟ-4

''ಹರಿಕಥೆ ಅಪೇಕ್ಷಿತವೇ? ಅನಪೇಕ್ಷಿತವೇ?-೧
- ಮ.ನಾ.ಹೆಬ್ಬಾರ, ಎಂ.ಎ., ಬಿ.ಎಡ್.
ಪುಟ-6




ಸಂಸ್ಕೃತ ಸುಭಾಷಿತಗಳಲ್ಲಿ ಶ್ಲೇಷೆ
-ವೈ.ಶಂಕರನಾರಾಯಣ ರಾವ್, ಪಡುಬಿದ್ರಿ
ಪುಟ-5

ಅರಳು ಪ್ರತಿಭೆ - ಪ್ರೀತಿಕಾ ಪಿಲಿಂಜ
- ಕೆ. ವೇಣುಗೋಪಾಲರಾವ್
ಪುಟ-7



# ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಸಂಸ್ಥಾಪಕ ಹಾಗೂ ಗೌರವಾಧ್ಯಕ್ಷ ಶ್ರೀ ಅಂಬಲಪಾಡಿ ಕೃಷ್ಣ ರಾವ್ ಅಸ್ತಂಗತ



ನಮ್ಮ ಸಂಘದ ಗೌರವಾಧ್ಯಕ್ಷರಾಗಿದ್ದ ಶ್ರೀ ಅಂಬಲಪಾಡಿ ಕೃಷ್ಣ ರಾವ್ (84) ಇವರು ತಾ.02-03-2010ರಂದು, ಮಂಗಳವಾರ ಮುಂಜಾನೆ ಮಣಿಪಾಲದಲ್ಲಿ ನಿಧನ ಹೊಂದಿದರು.

ಇವರು ಅಂಬಲಪಾಡಿ ಶ್ರೀನಿವಾಸ ರಾವ್-ಸತ್ಯಮ್ಮ ದಂಪತಿಗಳ ಮಗನಾಗಿ ಜನಿಸಿ ಉಡುಪಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದರು. ಅನಂತರ ಚೆನ್ನೈಗೆ ಹೋದ ಕೃಷ್ಣ ರಾವ್, ಶಿಕ್ಷಣವನ್ನು ಮುಂದುವರಿಸಿ ಎಮ್‌ಎ, ಎಮ್‌ಎಲ್, ಸಿಎಐಐಬಿ ಪದವಿಗಳನ್ನು ಪಡೆದರು. ಇವರು ಸ್ವಲ್ಪಕಾಲ ಭಾರತ ಸರಕಾರದ ಭಾಷಾ ಪ್ರಚಾರ ಇಲಾಖೆಯಲ್ಲಿ ಹಾಗೂ ಮದರಾಸಿನ ಲಾಯೆಲಾ ಕಾಲೇಜಿನಲ್ಲಿ ಸೇವೆ ಸಲ್ಲಿಸಿದರು. ನಂತರ ಸಿಂಡಿಕೇಟ್ ಬ್ಯಾಂಕಿನ ಚೀಫ್ ಲಾ ಆಫೀಸರ್ ಆಗಿ ನೇಮಕಗೊಂಡರು. 1957ರಲ್ಲಿ ಬ್ಯಾಂಕಿನ ಮುಂಗಡ ವಿಭಾಗದ ಉಪಾಧೀಕ್ಷಕರಾಗಿ ಸೇವೆ ಸಲ್ಲಿಸಿ, 1983ರಲ್ಲಿ ಬ್ಯಾಂಕಿನ ಕಾರ್ಯ ನಿರ್ವಾಹಕ ನಿರ್ದೇಶಕರಾದರು. 1984ರಲ್ಲಿ ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ನಿಯುಕ್ತಿಗೊಂಡು 1986ರ ವರೆಗೆ ದಕ್ಷ ಹಾಗೂ ಕಟ್ಟುನಿಟ್ಟಿನ ಅಧಿಕಾರಿಯಾಗಿ ಸೇವೆ ಸಲ್ಲಿಸಿದರು.

ಇವರು ಮೊದಲಿನಿಂದಲೂ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದು ಅಪಾರ ಜ್ಞಾನ ಮತ್ತು ಸ್ವ-ಸಾಮರ್ಥ್ಯದಿಂದ ಜೀವನದಲ್ಲಿ ಮುಂಭಡ್ತಿಗೊಳ್ಳುತ್ತಲೇ ಹೋದರು. ಸರಳ ಸಜ್ಜನ ನಡವಳಿಕೆ, ಬಡವರ ಬಗ್ಗೆ ಅನುಕಂಪ, ಬೆರೆತು ಬಾಳುವ ವಿಶಾಲ ಮನೋಭಾವ, ಪ್ರಾಮಾಣಿಕತೆ ಇವರ ಆದರ್ಶ ಗುಣಗಳು. ಯಾವ ವಿಷಯದ ಬಗ್ಗೆಯೂ ನಿರರ್ಗಳವಾಗಿ ಮಾತನಾಡುವ ಪಾಂಡಿತ್ಯ ಇವರಿಗಿತ್ತು. ಇವರು ರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಗೇರಿದ ನಮ್ಮ ಸಮಾಜದ ಬಹುಮುಖ ಪ್ರತಿಭೆಯಾಗಿದ್ದರು. ಇವರ ರೇಡಿಯೋ ಚಿಂತನಗಳು ಹಾಗೂ ಗಾಯತ್ರಿ ಮಂತ್ರದ ಮಹತ್ವದ ಬಗ್ಗೆ ವಿಚಾರಧಾರೆ ಎಲ್ಲರ ಮನಸೂರೆಗೊಂಡಿದ್ದವು.

ಇವರು ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದು, ಸಂಘದ ಅಧ್ಯಕ್ಷರಾಗಿ ಶಾರದಾ ಮಂಟಪವನ್ನು ನಿರ್ಮಿಸಿ ಇಂದಿನ ಮಟ್ಟಕ್ಕೆ ಬೆಳೆಸುವಲ್ಲಿ ತುಂಬಾ ಶ್ರಮಿಸಿದ್ದಾರೆ. ಮೊದಲಿನಿಂದಲೂ ಶ್ರೀಶಾರದಾ ಮಂಟಪದ ಆಡಳಿತ ಮಂಡಳಿಯಲ್ಲಿದ್ದು, ಕಾಲಕಾಲಕ್ಕೆ ತಮ್ಮ ಸಲಹೆ-ಸೂಚನೆಗಳನ್ನಿತ್ತು ಪ್ರೋತ್ಸಾಹಿಸುತ್ತಾ, ಕೊನೆಯ ವರೆಗೂ ಸಂಘದ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ನಮ್ಮ ಸಮಾಜಕ್ಕೆ ಅವರು ನೀಡಿದ ಸೇವೆಯನ್ನು ಪರಿಗಣಿಸಿ ಅವರಿಗೆ ಕೋಟೆಕಾರು ಶ್ರೀ ಸುಬ್ರಹ್ಮಣ ಸ್ಥಾನಿಕ ಬ್ರಾಹ್ಮಣ ಮಹಾಮಂಡಳದ ಪ್ರಥಮ ಸಮ್ಮೇಳನದಲ್ಲಿ ''ಸ್ಥಾನಿಕ ವಿಪ್ರ ರತ್ನ'' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇವರ ಇಳಿ ವಯಸ್ಸಿನ ದೈಹಿಕ ಅನಾರೋಗ್ಯದ ಕಾರಣ ಇವರ ಅನುಪಸ್ಥಿತಿಯಲ್ಲಿ ಪ್ರದಾನ ಮಾಡಿದ ಪ್ರಶಸ್ತಿಯನ್ನು ಶೃಂಗೇರಿ ಮಠದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವ ಇವರು ಮಣಿಪಾಲದಲ್ಲಿರುವ ಶ್ರೀ ಕೃಷ್ಣರಾವ್ ಇವರ ಮನೆಗೆ ತೆರಳಿ ಗೌರವಪೂರ್ವಕವಾಗಿ ಅರ್ಪಿಸಿದರು. ಪ್ರಶಸ್ತಿಯನ್ನು ಸ್ವೀಕರಿಸುತ್ತಾ ಇವರು ''ಇದು ಸುಸಂಸ್ಕೃತ ಸಮಾಜ ಬಾಂಧವರಿಗೆ ಸಂದ ಗೌರವ'' ಎಂದು ತಮ್ಮ ಕೃತಜ್ಞತೆಗಳನ್ನು ಸೌಜನ್ಯದಿಂದ ಅರ್ಪಿಸಿದ್ದರು. ಇವರು ಉಡುಪಿಯ ಹಿಂದಿ ಪ್ರಚಾರ ಸಮಿತಿ ಸಭಾ ಹಾಗೂ ಅಂಬಲಪಾಡಿಯ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿದ್ದು ಜೇಸಿಐಯಲ್ಲೂ ಸಕ್ರಿಯರಾಗಿದ್ದರು.

'ಉದಯವಾಣಿ'ಯ ಪ್ರಧಾನ ಸಂಪಾದಕರಾದ ಟಿ. ಸತೀಶ್ ಪೈ, ಸಿಂಡಿಕೇಟ್ ಬ್ಯಾಂಕಿನ ಮಾಜಿ ಅಧ್ಯಕ್ಷ ಡಿ.ಟಿ. ಪೈ, ಮಹಾಪ್ರಬಂಧಕ ಎಸ್.ಎಸ್.ಶೇಟ್ ಮತ್ತು ಇತರ ಹಿರಿಯ ಅಧಿಕಾರಿಗಳು, ಹೋಟೇಲು ಉದ್ಯಮಿ ಭುವನೇಂದ್ರ ಕಿದಿಯೂರು, ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷ ಸಿ.ಎಸ್.ರಾವ್ ಮತ್ತು ಸದಸ್ಯರು ಮೃತರ ಅಂತಿಮ ದರ್ಶನ ಪಡೆದು ಗೌರವ ಸಲ್ಲಿಸಿದರು. ಶ್ರೀ ಕೃಷ್ಣರಾವ್ ಇವರ ನಿಧನಕ್ಕೆ ಗೃಹ ಸಚಿವ ಡಾ। ವಿ. ಎಸ್. ಆಚಾರ್ಯ, ಬ್ಯಾಂಕಿನ ಮಾಜಿ ಅಧ್ಯಕ್ಷ ಡಾ। ಎನ್. ಕೆ. ತಿಂಗಳಾಯ ಮತ್ತಿತರು ಸಂತಾಪ ಸೂಚಿಸಿದ್ದಾರೆ.

ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಮಾಜದ ಮೇರುವ್ಯಕ್ತಿ, ದಾರ್ಶನಿಕ, ಚಿಂತಕ, ಮೇಧಾವಿ ಹಾಗೂ ಪ್ರತಿಷ್ಠಿತ ವ್ಯಕ್ತಿಯಾಗಿದ್ದ ಶ್ರೀ ಅಂಬಲಪಾಡಿ ಕೃಷ್ಣರಾಯರ ನಿಧನಕ್ಕೆ ಸಂತಾಪವನ್ನು ಸೂಚಿಸುತ್ತಾ ಶ್ರೀ ಶಾರದೆಯು ಇವರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸೋಣ.



## ಶ್ರೀಶಾರದಾ ದೇವಸ್ಥಾನ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 2. ಫೋನ್ : 2520754

ಪ್ರಿಯರೇ,

ತಾ.05-03-2010

ಸ್ವಸ್ತಿ ಶ್ರೀ ವಿಕೃತಿ ನಾಮ ಸಂ।ರದ ಮೀನ ಮಾಸ ದಿನ ೧೦ ಸಲುವ ಚೈತ್ರ ಶುಕ್ಲ ರಾಮ ನವಮಿ ತಾ.24-03-2010ನೇ ಬುಧವಾರ ಸಂಜೆ ಗಂಟೆ 5-00ರಿಂದ

**ಕಿರು ನವರಾತ್ರಿಯ ಶುಭ ಸಮಯದಲ್ಲಿ ಪರಿಸರದ ಭಕ್ತ ಬಾಂಧವರು ಭಕ್ತಿ-ಪ್ರೀತಿಯಿಂದ ಪೂಜಿಸಿಕೊಂಡು ಬರುತ್ತಿರುವ ಶ್ರೀಶಾರದಾ ಪರಮೇಶ್ವರೀ ಸನ್ನಿಧಿಯಲ್ಲಿ**

### ಸಾಮೂಹಿಕ ಶ್ರೀದುರ್ಗಾ ನಮಸ್ಕಾರ ಪೂಜೆಯು

ನೆರವೇರಲಿದೆ. ಪಾಲ್ಗೊಳ್ಳಲಿರುವ ಭಕ್ತಾದಿಗಳು ಶ್ರೀಶಾರದಾ ಮಂಟಪದ ಮೆನೇಜರ್‌ರವರಲ್ಲಿ ರೂ.125/-ನ್ನು ಸಲ್ಲಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ. ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಪೂಜೆಗೆ ಬರುವಾಗ ಹರಿವಾಣ, ಉದ್ಧರಣೆ ತರಬೇಕಾಗಿ ವಿನಂತಿ.

ಅಪರಾಹ್ನ 3 ರಿಂದ : ದೀಪವಿಟ್ಟು ಮಂಡಲ ರಚನೆ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತೀ ಪಾರಾಯಣ.

ಸಂಜೆ 5 ರಿಂದ : ಶ್ರೀಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ಪ್ರಾರ್ಥನೆ, ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ, ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ.

**ತಾ.16-03-2010ರಿಂದ ತಾ.24-03-2010ರ ವರೆಗೆ ಕಿರುನವರಾತ್ರಿಯ ಪ್ರಯುಕ್ತ ವಿಶೇಷ ಪೂಜೆಯು ಜರಗಲಿರುವುದು.**

**– ಆಡಳಿತ ಮಂಡಳಿ**

**ಸಂಪಾದಕ ಮಂಡಳಿ**

ವೈ. ಮೋಹನ ರಾವ್

ಎಚ್.ಎನ್. ಶ್ಯಾನುಭಾಗ್

ಪ್ರಕಾಶ್ ರಾವ್ ಕೋಲ್ಪೆ

ಟಿ. ಸುರೇಶ ರಾವ್ ಅಂಬಾಗಿಲು



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.


## ಚಿಂತನ

'ಸ್ವಾತಂತ್ರ್ಯ' ಪದಕ್ಕೆ ಬಿಡುಗಡೆ ಎಂಬ ಅರ್ಥವಿದೆ. ಆದರೆ ಸ್ವಾತಂತ್ರ್ಯವೆಂದರೆ ಕೇವಲ ಬಿಡುಗಡೆ ಮಾತ್ರವಲ್ಲ. ಇನ್ನೂ ಹೆಚ್ಚಿನ ಅರ್ಥವಿವರಣೆ ಕೊಡಬಹುದು.

ನಮ್ಮಲ್ಲಿ 'ಸ್ವಾತಂತ್ರ್ಯ' ಎಂದಾಕ್ಷಣ ಬ್ರಿಟಿಷರಿಂದ ಭಾರತವು ಬಿಡುಗಡೆ ಪಡೆದ ಚಿತ್ರವು ಕಣ್ಣಮುಂದೆ ನಿಲ್ಲುತ್ತದೆ. ಬ್ರಿಟಿಷರು ಭಾರತದ ಆಗಿನ ಜನತೆಗೆ ಕೊಟ್ಟ ಹಿಂಸೆ, ಭಾರತೀಯರು ಅನುಭವಿಸಿದ ಕಷ್ಟ ಮೊದಲಾದವುಗಳು ನೆನಪಾಗುತ್ತವೆ. ಕಷ್ಟಕೋಟಲೆಗಳೇ ಬ್ರಿಟಿಷರಿಂದ ಭಾರತದ ಬಿಡುಗಡೆಗೆ ಕಾರಣವಾಗಿ ನಾವು ಸ್ವತಂತ್ರರಾಗಿರುತ್ತೇವೆ ಎಂದರೆ ತಪ್ಪಾಗಲಾರದು.

ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡಿದ್ದಾರೆ ಎನ್ನುವುದಕ್ಕಿಂತಲೂ ನಾವು ಪಡೆದುಕೊಂಡಿದ್ದೇವೆ ಎನ್ನುವುದು ಹೆಚ್ಚು ಸೂಕ್ತ. ನಾವು ಪಡೆದುಕೊಂಡ ಈ ಸ್ವಾತಂತ್ರ್ಯವನ್ನು ಈಗ ಹೇಗೆ ಬಳಸುತ್ತಿದ್ದೇವೆ? ಈ ಬಗ್ಗೆ ಆಲೋಚಿಸ ಬೇಕು.

ಈ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಎಂದು ಸಂವಿಧಾನ ಹೇಳುತ್ತದೆ. ಒಂದು ಅರ್ಥದಲ್ಲಿ 'ಪ್ರಭು'ಗಳು ಹೌದು ಎಂದು ಅನಿಸುತ್ತದೆ. ಹೇಗೆಂದರೆ ಪ್ರಜೆ ಗಳಿಗೆ ನಮ್ಮನ್ನು ಆಳುವವರನ್ನು ಆರಿಸುವ, ಆರಿಸಿದ ಮೇಲೆ ಬೇಡದಿದ್ದಲ್ಲಿ ಅಧಿಕಾರದಿಂದ ಉರುಳಿಸುವ ಅಧಿಕಾರ ಖಂಡಿತ ಇದೆ. ಆ ಮೂಲಕ ಆಳುವವರನ್ನು ಹದ್ದುಬಸ್ತಿನಲ್ಲಿಡುವುದು ಕಾನೂನು ರೀತಿಯಲ್ಲಿ ಸರಿ ಎನಿಸಬಹುದು. ಆದರೆ ಇಂದು ನಮ್ಮನ್ನಾಳುವವರು ಆರಿಸಿ ಅಧಿಕಾರಕ್ಕೆ ಬರುವವರೆಗೆ ಮಾತ್ರ ಜನರ-ಪ್ರಜೆಗಳ ಹತ್ತಿರ ಬಂದು, ಅಧಿಕಾರ ಕೈಗೆ ಬಂದ ಮೇಲೆ ಆ ಪ್ರಜೆಗಳನ್ನು ಕಣ್ಣೆತ್ತಿಯೂ ನೋಡುವ ಗೋಜಿಗೆ ಹೋಗುವುದಿಲ್ಲ. ತಮ್ಮ ಅಧಿಕಾರವನ್ನು ಉಪಯೋಗಿಸಿ ಅಂತಹ ಪ್ರಜೆಗಳ ಮೇಲೆ ದಬ್ಬಾಳಿಕೆಯನ್ನೂ ಹೇರುತ್ತಾರೆ. ಪ್ರಜೆಗಳ ಕಷ್ಟಕ್ಕಿಂತಲೂ ಅವರ ಹಿತವೇ ದೊಡ್ಡ ದೆಂಬ ರೀತಿಯಲ್ಲಿ ವರ್ತಿಸುತ್ತಾರೆ. ಈ ರೀತಿಯಲ್ಲಿ ಪ್ರಜೆಗಳ-ನಾಗರಿಕರ ಸ್ವಾತಂತ್ರ್ಯವನ್ನು ಹರಣ ಮಾಡುತ್ತಾರೆ.

ಪ್ರಜೆಗಳಿಗೆ ಬೇಕಾದ ಅನುಕೂಲತೆಗಳು ಸರಿಯಾದ ಕ್ರಮದಲ್ಲಿ ಪೂರೈಕೆಯಾಗದಿದ್ದಲ್ಲಿ ಅದನ್ನು ಕೇಳಲು ಆ ಪ್ರಜೆಗಳಿಗೆ ಅಧಿಕಾರವಿದ್ದರೂ ಅವರಿಗೆ ಕೇಳಲು ಸಾಧ್ಯವಾಗುವುದಿಲ್ಲ. ಅಲ್ಲದೆ ಕೇಳಿದರೆ ಅವರಿಗೆ ಪ್ರತಿಯಾಗಿ ನ್ಯಾಯ ಒದಗಿಸುವ ಬದಲು ಪ್ರತಿಕಾರ ರೂಪದಲ್ಲಿ ಇನ್ನೊಂದು ತೊಂದರೆ-ಕಿರುಕುಳ ತಪ್ಪಿದ್ದಲ್ಲ. ಇದು ಇಂದು ನಡೆಯುತ್ತಿರುವ ವಿದ್ಯಮಾನವಾಗಿರುತ್ತದೆ. ಹಾಗಿದ್ದರೆ ಸ್ವಾತಂತ್ರ್ಯ ಎಂದರೆ ಏನು? ಅಂತಹ ಸ್ವಾತಂತ್ರ್ಯವನ್ನು ನಾವು ಅನುಭವಿಸುತ್ತಿದ್ದೇವೆಯೇ? ನಾವು ಈಗ ಅನುಭವಿಸುವ ಈ ಸ್ವಾತಂತ್ರ್ಯ ನಮಗೆ ಬೇಕೇ? ಈ ಬಗ್ಗೆ ಸ್ವಲ್ಪ ಯೋಚಿಸಿದರೆ ಒಳ್ಳೆಯದಲ್ಲವೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



– ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

**ಪ್ರಕಟಣೆ : ಶ್ರೀಕೃಷ್ಣಾಯನ ಧಾರಾವಾಹಿಯು ಶ್ರೀಶಾರದಾ ಪತ್ರಿಕೆಯ ಫೆಬ್ರವರಿ ಸಂಚಿಕೆಯಲ್ಲಿ ತಪ್ಪಾಗಿ ಮಧ್ಯದ ಭಾಗವು ಮುದ್ರಿಸಲ್ಪಟ್ಟಿದ್ದು ಈ ಸಂಚಿಕೆಯಲ್ಲಿ ಇದನ್ನು ಸರಿಪಡಿಸಲಾಗಿದೆ. ಜನವರಿಯಲ್ಲಿ ಪ್ರಕಟವಾದ ಕಂತಿನ ಕೊನೆಯ ಪರಿಚ್ಛೇದವನ್ನು ಕೊಟ್ಟಿದ್ದು ಅಲ್ಲಿಂದ ಮುಂದುವರಿದ ಭಾಗವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.**

ಒಂದು ದಿನ ಹುಲ್ಲುಗಾವಲಲ್ಲಿ ಮೇಯುತ್ತಿದ್ದ ಗೋವುಗಳೆಲ್ಲ ಮುಂದೆ ಮುಂದೆ ಹೋಗುತ್ತ ಒಂದು ನಿಬಿಡವಾದ ಕಾಡಿಗೆ ಪ್ರವೇಶಿಸಿಬಿಟ್ಟವು. ಆ ಕಾಡಿನಲ್ಲಿ ಅವುಗಳು ಸಿಕ್ಕಾಬಟ್ಟೆ ಅಲೆದಾಡಿದವು. ಕೊನೆಗೆ ಅವುಗಳಿಗೆ ಊರಿನ ದಾರಿಯೇ ತಿಳಿಯದಾಯಿತು. ಅವುಗಳು ದಿಕ್ಕೆಟ್ಟು ಕೂಗುತ್ತಾ ಮುಂಜ ಹುಲ್ಲಿನ ಕಾಡಿಗೆ ಹೋದವು. ಹಸುಗಳು ಎಲ್ಲಿ ಹೋದವೆಂಬುದು ಆಟದಲ್ಲಿ ಮಗ್ನರಾಗಿದ್ದ ಗೊಲ್ಲರಿಗೂ ಗೊತ್ತಾಗಲಿಲ್ಲ. ಅವರೆಲ್ಲ ಅವುಗಳ ಹೆಸರುಗಳನ್ನು ಹಿಡಿದು ಕೂಗುತ್ತಾ ಹುಡುಕಲಾರಂಭಿಸಿದರು. ಶ್ರೀಕೃಷ್ಣನೂ ಅವುಗಳನ್ನು ಕರೆದನು. ಅವನ ಸ್ವರವನ್ನು ಕೇಳಿ ಅವುಗಳೂ ಸಂತಸದಿಂದ ಕೂಗಿಕೊಂಡವು. ಮುಂಜೆಯ ಅಡವಿಯಲ್ಲಿ ಸಿಕ್ಕಿಹಾಕಿಕೊಂಡಿದ್ದ ಹಸುಗಳು ಅವರಿಗೆ ಕಾಣಿಸಿದವು. ಆದರೆ ಅಷ್ಟರಲ್ಲೇ ಆ ಕಾಡಿನ ನಾಲ್ಕೂ ದಿಕ್ಕಿನಲ್ಲಿ ದಾವಾಗ್ನಿ ಹೊತ್ತಿ ಉರಿಯ ತೊಡಗಿತ್ತು. ಕಾಡ್ಗಿಚ್ಚು ಬಹಳ ವೇಗವಾಗಿ ಉರಿಯುತ್ತಾ ತಮ್ಮತ್ತ ಬರುವುದನ್ನು ಕಂಡು ಗೋವುಗಳೂ, ಗೋವಳರೂ ಹೆದರಿ ಕಂಗಾಲಾದರು. ಗೊಲ್ಲರು ಶ್ಯಾಮನನ್ನೂ, ರಾಮನನ್ನೂ ತಮ್ಮನ್ನು ಕಾಪಾಡುವಂತೆ ಬೇಡಿಕೊಂಡರು. ನಂದಕಂದನು ಕಣ್ಣು ಮುಚ್ಚಿ ನಿಲ್ಲುವಂತೆ ಅವರಿಗೆ ಹೇಳಿದನು. ಅವರೆಲ್ಲ ಕಣ್ಣುಮುಚ್ಚಿ ಭಗವಂತನ ಧ್ಯಾನ ಮಾಡುತ್ತಾ ನಿಂತರು. ಆಗ ಕೃಷ್ಣ ವೇಷಧಾರಿ ಪರಮಾತ್ಮನು ಆ ಕಾಡ್ಗಿಚ್ಚನ್ನು ನುಂಗಿಬಿಟ್ಟನು. ಅವರೆಲ್ಲ ಕಣ್ಣು ತೆರೆದಾಗ ಒಂದು ಬೃಹತ್ತಾದ ಭಾಂಡೀರ(ವಟ) ವೃಕ್ಷದ ಬಯಲಲ್ಲಿದ್ದರು. ಶ್ರೀಕೃಷ್ಣನ ಮಹಿಮೆಗೆ ವಿಸ್ಮಿತರಾದ ಗೊಲ್ಲರೆಲ್ಲ ಅವನನ್ನು ಧರೆಗಿಳಿದ ಭಗವಂತನೆಂದೇ ನಂಬಿದರು. ತಂತಮ್ಮ ಅನುಭವವನ್ನು ತಂತಮ್ಮ ಮನೆಗಳಲ್ಲಿ ಬಿತ್ತರಿಸಿ ಹೇಳಿದರೂ ಕೂಡ. ಎಲ್ಲರೂ ರಾಮ, ಶ್ಯಾಮರು ಮನುಷ್ಯರೂಪದ ಯಾರೋ ದೇವತೆಗಳೆಂದು ಭಾವಿಸಿದರು.

ಮಳೆಗಾಲ ಕಳೆದು ಸುಂದರವಾದ ಶರತ್ಕಾಲ ಕಾಲಿಟ್ಟಿತು. ಎಲ್ಲೆಡೆ ನವಚೇತನ ಚೆಲ್ಲಾಡಿತು. ಪ್ರಕೃತಿಯಲ್ಲೂ, ಮಾನವರ ಹೃದಯದಲ್ಲೂ ನಿರ್ಮಲತೆ ಮುಕ್ಕುಳಿಸಿತು. ಇಂತಹ ಸಮಯದಲ್ಲಿ ಶ್ರೀಕೃಷ್ಣನು ಗೊಲ್ಲರ ಜೊತೆ ಹಸುಗಳನ್ನು ಮೇಯಿಸುತ್ತಾ ಕಾಡಿಗೆ ತೆರಳಿದನು. ಅವನ ಹೃದಯದಲ್ಲೂ ಆನಂದ ಉಕ್ಕಿ ಹರಿಯುತ್ತಿತ್ತು. ಅವನು ತನ್ನ ಪ್ರಿಯವಾದ ಕೊಳಲನ್ನು ನುಡಿಸತೊಡಗಿದನು. ಆ ದಿವ್ಯ ವೇಣುಗಾನಕ್ಕೆ ಇಡೀ ವ್ರಜಲೋಕ ಆಕೃಷ್ಟವಾಯಿತು. ವಿಶೇಷವಾಗಿ ಗೋಪಕನ್ಯೆಯರು ವೇಣುಗೀತೆಯ ಮತ್ತು ಅದಕ್ಕಿಂತಲೂ ಹೆಚ್ಚಾಗಿ ಸುಂದರನಾದ ಕೃಷ್ಣನ ರೂಪದ ಸಮ್ಮೋಹಕ್ಕೆ ಒಳಗಾದರು. ಪೀತಾಂಬರ, ನವಿಲುಗರಿಗಳ ಚೆಲುವನನ್ನು ಸ್ಮರಿಸಿಕೊಳ್ಳುತ್ತ ಪ್ರೇಮೋನ್ಮಾದಕ್ಕೆ ಪಕ್ಕಾದವರಂತೆ ವರ್ತಿಸಿದರು. ಆ ಯುವತಿಯರಲ್ಲಿ ಕೆಲವರು ಶ್ಯಾಮಸುಂದರನ ವೇಷವನ್ನು ಧರಿಸಿ ಕೊಳಲೂದುತ್ತ ನರ್ತಿಸಿದರು. ಇನ್ನು ಕೆಲವರು ಅವರನ್ನೇ ಕೃಷ್ಣನೆಂದು ಭ್ರಮಿಸಿ, ಆಲಿಂಗಿಸಿ ಸಂಭ್ರಮಿಸಿದರು. ಇನ್ನು ಕೆಲವರು ಕೃಷ್ಣನ ಅದರಸ್ಪರ್ಶದಿಂದ ಧನ್ಯವಾದ ಕೊಳಲನ್ನು ಇನ್ನಿಲ್ಲದಂತೆ ಹೊಗಳಿದರು. ಮೃಗ ಪಕ್ಷಿಗಳೂ ವೇಣುಗಾನದಿಂದ ಮೋದ ಗೊಂಡು ತಂತಮ್ಮ ಪ್ರಿಯತಮರೊಂದಿಗೆ ಬೆರೆತು ಆನಂದಿಸಿದವು. ಅಷ್ಟೇಕೆ? ಗಗನಗಾಮಿಗಳಾದ ದೇವತೆಗಳೂ ಪ್ರೇಮೋನ್ಮಾದಕ್ಕೊಳಗಾದರು.

ಶರದೃತು ಕಳೆದು ಹೇಮಂತ ತಲೆ ಹಾಕಿತು. ಇದು ಚಳಿಗಾಲ. ಗೋಪ ಬಾಲೆಯರು ಕಾತ್ಯಾಯನಿಯ ಪೂಜೆ ಕೈಗೊಂಡರು. ಉಪವಾಸ ವ್ರತವನ್ನಾಚರಿಸುತ್ತಾ ಶ್ರೀಕೃಷ್ಣನೇ ತಮ್ಮ ಪತಿಯಾಗಲೆಂದು ಬಯಸಿ ಕಾತ್ಯಾಯನಿಯನ್ನು ಆರಾಧಿಸಿದರು. ಪ್ರತಿದಿನ ಬೆಳ್ಳಂಬೆಳಗೆ ಎದ್ದು ಯಮುನೆಗೆ ಹೋಗಿ ಸೀರೆಗಳನ್ನು ದಡದ ಮೇಲಿಟ್ಟು ಸ್ನಾನಮಾಡುತ್ತಿದ್ದರು. ಅವರ ಅಭೀಷ್ಟ ಸರ್ವಾಂತರ್ಯಾಮಿಯಾದ ಶ್ರೀಕೃಷ್ಣನಿಗೆ ತಿಳಿಯದಿರಲು ಸಾಧ್ಯವೇ? ಅವರ ವಾಂಛೆಯನ್ನು ಪೂರೈಸಬೇಕೆಂದು ನಿಶ್ಚಯಿಸಿದ ಚೆಲುವನೂ, ತುಂಟನೂ ಆದ ಬಾಲಗೋಪಾಲನು ಸದ್ದು ಮಾಡದೆ ಆ ಕನ್ಯಾಮಣಿಗಳು ಸ್ನಾನಮಾಡುತ್ತಿದ್ದ ಸ್ಥಳಕ್ಕೆ ಹೋದನು. ಅವನ ಸಂಗಡ ಗೊಲ್ಲರ ಹುಡುಗರೂ ನಡೆದರು. ಅಲ್ಲಿ ದಡದ ಮೇಲಿದ್ದ ಸೀರೆಗಳನ್ನೆಲ್ಲ ಎತ್ತಿಕೊಂಡು ಅಲ್ಲೊಂದು ಮರಕ್ಕೆ ಹತ್ತಿ ಕುಳಿತನು. ಗೋವಳ ಬಾಲಕರು ಜೋರಾಗಿ ನಕ್ಕರು. ಆಗ ಆ ನಗ್ನರಾಗಿದ್ದ ಹುಡುಗಿಯರು ಗಾಬರಿಯಿಂದ ಕಂಠದವರೆಗೆ ನೀರಿನಲ್ಲಿ ಮುಳುಗಿ ಕುಳಿತರು. ಪರಸ್ಪರ ಮುಖನೋಡಿಕೊಂಡು ಮುಸಿ ಮುಸಿ ನಗುತ್ತಿದ್ದರು. ಚಳಿಯಿಂದ ಗಡಗಡ ನಡುಗುತ್ತಿದ್ದರು ಬೇರೆ. ಆಗ ಆ ಕದಂಬ ವೃಕ್ಷದ ಮೇಲೆ ಕುಳಿತಿದ್ದ ತುಂಟನು ಅವರನ್ನು ಕುರಿತು ಹೇಳಿದನು–ಹುಡುಗಿಯರೇ, ನಿಮಗೆ ನಿಂನಿಮ್ಮ ಬಟ್ಟೆಗಳು ಬೇಕೆಂದರೆ ಒಬ್ಬೊಬ್ಬರಾಗಿ ಮೇಲಕ್ಕೆ ಬಂದು ಕೇಳಿ ಪಡೆದುಕೊಳ್ಳಬಹುದು. ಅಥವಾ ಗುಂಪಾಗಿಯೂ ಬರಬಹುದು.

ಈ ಮಾತನ್ನು ಕೇಳಿದ ಆ ಕುಮಾರಿಯರಿಗೆ ಅವನ ಮೇಲೆ ಪ್ರೇಮ ಉಕ್ಕಿ ಹರಿಯಿತು. ಆದರೆ ನಾಚಿಕೆಯಿಂದಾಗಿ ನೀರಿನಿಂದೆದ್ದು ಬಾರದಾದರು. ನೀರಿನಲ್ಲೇ ಮುಕ್ಕಾಲು ಭಾಗ ಮುಳುಗಿದ್ದು ಕೃಷ್ಣನಿಗೆ ಹೇಳಿದರು–ತುಂಟ ಸುಂದರನೆ, ನೀನು ಈ ರೀತಿ ಅನ್ಯಾಯ ಮಾಡುವುದಾ? ನಾವು ನಿನ್ನ ದಾಸಿಯರಲ್ಲವೇ? ನಮಗೆ ಕಾಟಕೊಡಬೇಡ. ನಾವು ಚಳಿಯಿಂದ ನಡುಗುತ್ತಿದ್ದೇವೆ. ನಮಗೆ ನಮ್ಮ ಬಟ್ಟೆಗಳನ್ನು ಕೊಟ್ಟು ಬಿಡು ಮಾರಾಯ.

ಕೃಷ್ಣನೆಂದನು–ನೀವು ದಾಸಿಯರಾದರೆ ನಾನು ಹೇಳಿದಂತೆ ಕೇಳತಕ್ಕದ್ದು. ನೀವು ಮೇಲೆ ಬಂದು ಬಟ್ಟೆಗಳನ್ನು ತೆಗೆದುಕೊಳ್ಳಿರಿ.

ಆಗ ಆ ಕನ್ಯೆಯರು ತಮ್ಮೆರಡು ಕೈಗಳಿಂದ ತಮ್ಮ ಗುಪ್ತಾಂಗಗಳನ್ನು ಮುಚ್ಚಿಕೊಂಡು ದಡಕ್ಕೆ ಬಂದರು. ಆಗ ಬಾಲ ಭಗವಂತನು ಅವರಿಗೆಂದನು– ಹುಡುಗಿಯರೆ, ನಿಮ್ಮ ಪೂಜೆಯಿಂದ ನನಗೆ ಸಂತೋಷವಾಗಿದೆ. ಆದರೆ ನೀವು ಒಂದು ಅಪರಾಧ ಮಾಡಿದ್ದೀರಿ''

''ಅಪರಾಧವೇ? ಅದೇನು ಕೃಷ್ಣ?''

''ನೀವು ಬತ್ತಲೆಯಾಗಿ ನೀರಲ್ಲಿ ಸ್ನಾನ ಮಾಡಿದ್ದು ವರಣುದೇವರಿಗೆ ಮಾಡಿದ ಅವಮಾನ. ಈ ರೀತಿ ನೀವು ಯಮುನೆಯನ್ನು ಕಡೆಗಣಿಸಿದಂತಾಗಿದೆ. ಈ ಅಪರಾಧಕ್ಕೆ ಪ್ರಾಯಶ್ಚಿತ್ತವಾಗಿ ನೀವು ಅವರಿಬ್ಬರಿಗೂ ತಲೆಯ ಮೇಲೆ ಅಂಜಲಿಯನ್ನಿಟ್ಟು ನಮಸ್ಕರಿಸಬೇಕು.'' ಆದರೆ ಆ ಕನ್ಯೆಯರು ಹಾಗೆ ಮಾಡಲಿಲ್ಲ. ಅದರ ಬದಲು ದೇವಾಧಿದೇವನಾದ ಶ್ರೀಕೃಷ್ಣನಿಗೇ ಕೈಮುಗಿದರು. ಇದರಿಂದ ಸಕಲದೇವತೆಗಳಿಗೂ ನಮಸ್ಕಾರ ಸಲ್ಲುವುದೆಂದು ಅವರು ನಂಬಿದ್ದರು. ಹೀಗೆ ದೇಹಭಾವವನ್ನು ಮರೆತು ಆತ್ಮಭಾವದಿಂದ ನಮಸ್ಕರಿಸಿದ ಆ ಕುಮಾರಿಯರ ಮೇಲೆ ಶ್ರೀಕೃಷ್ಣನಿಗೆ ಪ್ರೇಮವುಕ್ಕಿತು. ಅವನು ಅವರ ಬಟ್ಟೆಗಳನ್ನು ಹಿಂದಿರುಗಿಸಿದನು. ಯಾವ ಲಜ್ಜೆಯೂ ಇಲ್ಲದೆ ಗೋಪಕನ್ಯೆಯರು ನಿಧಾನವಾಗಿ ಬಟ್ಟೆಗಳನ್ನು ತೊಟ್ಟರು. ಶ್ರೀಕೃಷ್ಣನನ್ನು ಬಿಟ್ಟು ಹೋಗಲು ಮನಸ್ಸಿಲ್ಲದೆ ಅಲ್ಲೇ ನಿಂತರು. ಭಗವಂತನು ಅವರ ಮನೋರಥಗಳು ನೆರವೇರಲೆಂದು ಹರಸಿದನು. ಅನಂತರ ಅವರೆಲ್ಲ ಮೆಲ್ಲ ಮೆಲ್ಲನೆ ವ್ರಜದ ಕಡೆಗೆ ಹೆಜ್ಜೆ ಹಾಕಿದರು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಕರ್ತವ್ಯಂ ದೈವಮಾಹ್ನಿಕಂ ।**

ಅಂದರೆ ಕರ್ತವ್ಯವೇ ದೇವರು

**ಪುಸ್ತಕ ಪರಿಚಯ :**

''ಕೆಂಡ''

*ಲೇಖಕರು :* ಎಂ. ವ್ಯಾಸ

ಪಲ್ಲವ ಪ್ರಕಾಶನ, ಚೆನ್ನಪಟ್ಟಣ

ಎಂ. ವ್ಯಾಸ ಕನ್ನಡದ ಕಥಾಜಗತ್ತಿನಲ್ಲೊಂದು ವಿಭಿನ್ನ ಮತ್ತು ವಿಶಿಷ್ಟ ಪ್ರತಿಭೆ. ಗಡಿನಾಡಾದ ಕಾಸರಗೋಡಿನಲ್ಲಿದ್ದು ಸುಮಾರು ನಾಲ್ಕು ದಶಕಗಳಿಂದ ಬರೆಯುತ್ತಾ ಬಂದ ವ್ಯಾಸರ ನೂರಾರು ಕತೆಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರತಿಯೊಂದು ಕತೆಯೂ ಮನುಷ್ಯ ಮನೋವಿಲಾಸದ ನಿರೂಪಣೆಯೇ ಆಗಿದೆ. ಮನಸ್ಸು ರೂಪುಗೊಳ್ಳುವುದು ಮನುಷ್ಯ ಕಂಡುಕೊಂಡ ಸತ್ಯ, ಕನಸು ಮತ್ತು ಭ್ರಮೆಗಳಿಂದ. ಹಾಗಾಗಿ ಮನುಷ್ಯರಿರುವಷ್ಟೇ ವೈವಿಧ್ಯವಾದ ಮನಸ್ಸುಗಳೂ ಇರುತ್ತವೆ. ಹೊರಗೆ ಕಾಣಿಸುವ ಮನುಷ್ಯನ ಆಕಾರ ಮನುಷ್ಯನ ನಿಜವಾದ ಆಕಾರ ಅಲ್ಲ. ಇಂಥ ಮನಸ್ಸುಗಳೇ ಒಂದೇ ಶ್ರುತಿಯಿಂದ ಹೊರಟ ನಾದತರಂಗಗಳಂತೆ ವ್ಯಾಸರ ಮೂಲಕ ಕತೆಗಳಾಗಿ ಪ್ರಕಟವಾದವು. ವ್ಯಾಸರೂ ಅಷ್ಟೆ, ತಮ್ಮ ಕತೆಗಳ ಮೂಲಕವಲ್ಲದೆ ಬೇರಾವ ರೀತಿಯಲ್ಲೂ ಪ್ರಕಟಗೊಳ್ಳಲು ಬಯಸಲೇ ಇಲ್ಲ ಎಂದು 'ಕೆಂಡ' ಕೃತಿಯ ಬಗ್ಗೆ ಡಾ। ವರದರಾಜ ಚಂದ್ರಗಿರಿ 'ಎರಡು ಮಾತು'ಗಳಲ್ಲಿ ತಿಳಿಸುತ್ತಾರೆ.

ವ್ಯಾಸರ ಕತೆಗಳ ಬಗ್ಗೆ ಅನೇಕ ಮಾತುಗಳನ್ನು ಹೇಳಲು ಮನಸ್ಸು ತುಡಿಯುತ್ತಿದೆ. ಅವರು ಸೃಷ್ಟಿಸಿದ ಒಂದೊಂದು ಪಾತ್ರವೂ ಕಣ್ಮುಂದೆ ಬಂದು ಕುಣಿಯುತ್ತಿದೆ. ಅವುಗಳ ಜಿಗುಟು, ಅವುಗಳ ಅಸ್ಮಿತೆ, ಮುಖವಾಡಗಳನ್ನು ಕಳಚಿಹಾಕಲು ಅವು ತುಡಿಯುತ್ತಿರುವ ರೀತಿ ಎಲ್ಲವೂ ಮನಸ್ಸಿನಲ್ಲಿ ಉಳಿದು ಬಿಡುತ್ತವೆ. ಅವರು ಸೃಷ್ಟಿಸಿದ ದುರ್ಗಾಪುರ, ಹೊಸದುರ್ಗ, ಶಂಕರೀನದಿ, ಹಿಂಗೇರಿ ಬೆಟ್ಟ, ಕಡಲ ಕಿನಾರೆ, ಗುಡ್ಡ, ಕಣಿವೆ, ಪೇಟೆ, ಪರಿಸರ ಎಲ್ಲವೂ ಚಿತ್ರದಲ್ಲಿ ಬರೆದ, ಬಣ್ಣಗಳಲ್ಲಿ ರೂಪಿಸಿದ ವಸ್ತುಗಳಲ್ಲ; ಹಾಗೆಯೇ ಕಲ್ಪನೆಯಲ್ಲಿ ಮೂಡಿದ ಕಲ್ಪನಾಲೋಕವೂ ಅಲ್ಲ. ಉಸಿರಾಡುತ್ತ, ಜೀವಂತವಾಗಿ ಸ್ಪಂದಿಸುತ್ತ, ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತ, ನೋಯುವ, ಬೇಯುವ, ಋತುಮಾನಕ್ಕೆ ಸ್ಪಂದಿಸುವ ಸಂಗತಿಗಳು. ಬದುಕನ್ನು ಗಂಭೀರವಾಗಿ ತೆಗೆದುಕೊಂಡು ಯಾವ ಲೇಖಕನಿಗೂ ಒಂದು ಪರಿಸರ ಎಂದರೆ ಅದು ಆ ಲೇಖಕ ಸೃಷ್ಟಿಸುವ ಪಾತ್ರಗಳಂತೆ ಜೀವಂತವಾಗಿಯೇ ಇರುತ್ತದೆ. ಅದಕ್ಕೂ ಒಂದು ವ್ಯಕ್ತಿತ್ವ ಪ್ರಾಪ್ತವಾಗಿರುತ್ತದೆ. ವ್ಯಾಸರ ಕತೆಗಳಲ್ಲಿ ಮೈತಳೆಯುವ ಪರಿಸರ ಈ ಮಾದರಿಯದು ಎಂದು ಜಿ.ಪಿ.ಬಸವರಾಜು ಅವರು ಈ ಕೃತಿಯಲ್ಲಿ 'ಎಂ. ವ್ಯಾಸರು ಬಿಟ್ಟು ಹೋದ ಪಾತ್ರಗಳು' ಎಂಬಲ್ಲಿ ತಿಳಿಸುತ್ತಾರೆ.

ಮನುಷ್ಯ ಬದುಕಿನ ವಿವಿಧ ಮುಖಗಳನ್ನು ಪ್ರಾಮಾಣಿಕತೆಯಿಂದ ಚಿತ್ರಿಸುವ ವ್ಯಾಸರು ಬದುಕಿನ ವಾಸ್ತವ ದರ್ಶನವನ್ನು ಮಾಡಿಸಬಲ್ಲರು. ನಾವೆಲ್ಲರೂ ಓದಲೇಬೇಕಾದ ಎಂ.ವ್ಯಾಸರ ಇನ್ನೊಂದು ಕೃತಿ 'ಕೆಂಡ'.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ

# ॐ ಈಶಾವಾಸ್ಯಮ್ ಗುರುಕುಲ, ಬೆಂಗಳೂರು

**(ಪ್ರಕಟಣೆ-೪)**

**- ಶ್ರೀ ಜಿ. ಕೆ. ರಾವ್, ಅಧ್ಯಾಪಕರು, ಗುರಕುಲ**

*ಓಂ ಈಶಾವಾಸ್ಯಮಿದಗ್ಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್*
*ತೇನ ತ್ಯಕ್ತೇನ ಭುಂಜೀಥಾ ಮಾ ಗೃಥ ಕಸ್ಯಸ್ವಿದ್ಧನಮ್ ॥*

‘ಮನೆಮನೆಗೂ ವೇದ ಪ್ರಸಾರ’ ಮಾಡುವ ಸದುದ್ದೇಶದ ಫಲಶ್ರುತಿಯಾಗಿ 19-9-2009 ರಂದು ಬೆಂಗಳೂರು ಮಹಾನಗರದಲ್ಲಿ ‘ॐ ಈಶಾವಾಸ್ಯಮ್’ ವೇದಾಧ್ಯಯನ ಸಂಚಾರಿ ಗುರುಕುಲ’ವೆಂಬ ಆಧ್ಯಾತ್ಮ ತತ್ವ ಬೋಧಕ ವಿದ್ಯಾಸಂಸ್ಥೆಯ ಸ್ಥಾಪನೆಯಾಯಿದು. ಆದಿ ದೈವಿಕ ನೆಲೆಯಲ್ಲಿ ಗುರುಕುಲದ ಧ್ಯೇಯ ‘‘ವೇದ ಸಾರ ಸುಧಾ ರಸ ದಾನ ಯಜ್ಞ’’.

ಪ್ರಕೃತ ಈ ಸಂಚಾರಿ ಗುರುಕುಲದ ಪ್ರಥಮ ಮಂಡಲದಲ್ಲಿ 16 ವಿದ್ಯಾರ್ಥಿಗಳು ಶಿಷ್ಯತ್ವವನ್ನು ಸ್ವೀಕರಿಸಿ ಗುರುಕುಲದ ವಾರಾಂತ್ಯದ ತರಗತಿಗಳಲ್ಲಿ ಉಚಿತ ವೇದಾಧ್ಯಯನ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ. ಇವರಲ್ಲಿ 12 ವರ್ಷದ ಓರ್ವ ಬಾಲಕಿ, ಆರು ಮಂದಿ ಪುರುಷರು, 9 ಮಂದಿ ಮಹಿಳೆಯರು ಪ್ರಥಮ ವರ್ಷದ ಪಾಠಪಟ್ಟಿಯಲ್ಲಿರುವ ಕೃಷ್ಣಯಜುರ್ವೇದದಿಂದ ಆಯ್ದ ಪ್ರಸಿದ್ಧ 18 ಸೂಕ್ತಗಳ ಪಠಣ-ಅಧ್ಯಯನ ಮಾಡುತ್ತಿದ್ದು ಬರುವ ಮಾರ್ಚ್ ತಿಂಗಳಲ್ಲಿ ಈ ತಂಡದ ಅಧ್ಯಾಪನ ಕಾರ್ಯಪೂರ್ಣಗೊಳ್ಳಲಿದೆ.

ಈ ತರಗತಿಗಳನ್ನು ಕಳೆದ 5 ತಿಂಗಳಲ್ಲಿ ಬೆಂಗಳೂರು ನಗರದ ಉತ್ತರ ಭಾಗದ ಆರ್.ಟಿ.ನಗರದ ಶ್ರೀಮತಿ ಸಬೀತಾ ಮತ್ತು ಶ್ರೀ ಶ್ರೀನಿವಾಸ ರಾವ್ ಇವರ ಸ್ವಗೃಹ ‘ಮಂಜುಶಾ’ದಲ್ಲಿ, ಮತ್ತಿಕೆರೆಯ ಶ್ರೀಮತಿ ಮತ್ತು ಶ್ರೀ ಸುಂದರೇಶ ಶರ್ಮಾರವರ ಸ್ವಗೃಹ ‘ಶ್ರೇಯಸ್’ನಲ್ಲಿ, ಬೆಂಗಳೂರಿನ ನಮ್ಮ ಸಭಾದ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಯಾಗ ಶಾಲೆಯ ವಿಶಾಲ ಶಾಂತ ವಾತಾವರಣದಲ್ಲಿ ಮತ್ತು ಪ್ರಕೃತ ಶನಿವಾರ ಮಧ್ಯಾಹ್ನ 3ರಿಂದ 6 ಗಂಟೆಯವರೆಗೆ ರಾಜಾಜಿನಗರ ಮೂರನೆ ಬ್ಲಾಕ್ ರಾಮಮಂದಿರ ಸಮೀಪ ಇರುವ ಶ್ರೀಮತಿ ಕಲ್ಯಾಣಿ ಬಿ.ವಿ.ರಾವ್ ಇವರ ಸ್ವಗೃಹ ‘ಜಯಂತಿ’ (ದೂ.23151929)ಯಲ್ಲಿ ಮತ್ತು ಭಾನುವಾರ ಬೆಳಿಗ್ಗೆ 6ರಿಂದ 8ರ ವರೆಗೆ ಕಮಲಾನಗರದಲ್ಲಿ (ದೂ.23, 230992) ಶ್ರೀಮತಿ ರೇಖಾ ಮತ್ತು ಶ್ರೀ ಜಿ. ಕೆ. ರಾವ್ ಇವರ ಸ್ವಗೃಹ ‘ಸುರಕ್ಷಾ’ದಲ್ಲಿ ನಡೆಸಲಾಗುತ್ತಿದೆ. ಗುರುಕುಲದ ಸಂಚಾರಿ ತರಗತಿಗಳನ್ನು ನಡೆಸಲು ಉಚಿತವಾಗಿ ಸ್ಥಳಾವಕಾಶ ಮಾಡಿಕೊಟ್ಟಿರುವ ಈ ಎಲ್ಲಾ ಸಂಸ್ಥೆ ಹಾಗೂ ಸಹೃದಯ ‘ಗುರುಕುಲ ಪೋಷಕ’ರಿಗೆ ಗುರುಕುಲದ ಆಡಳಿತ ಮಂಡಳಿಯು ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತದೆ. ಅಂತೆಯೇ ಅವರೆಲ್ಲರಿಗೂ ‘ವೇದಪುರುಷ’ನ ಪೂರ್ಣಾನುಗ್ರಹ ದೊರೆಯಲಿ ಎಂದು ಪ್ರಾರ್ಥಿಸುತ್ತದೆ.

ಹಾಗೆಯೇ, ಗುರುಕುಲದ ಪ್ರಕಟಣೆಗಳನ್ನು ಸುಂದರವಾಗಿ ಮುದ್ರಿಸಿ ನಮ್ಮ ಸಮಾಜದ ಬಂಧುಗಳ ಮನೆ ಮನೆಗೂ ಗುರುಕುಲದ ಉದ್ದೇಶ. ಸಂದೇಶಗಳನ್ನು ಮುಟ್ಟಿಸಿ ಸಹಕರಿಸಿದ ನಮ್ಮ ಸಮಾಜದ ಪ್ರತಿಷ್ಠಿತ ಮಾಸಪತ್ರಿಕೆಗಳ ಸಂಪಾದಕ ಹಾಗೂ ಆಡಳಿತ ವರ್ಗದವರಿಗೆ ‘ಗುರುಕುಲ’ವು ತುಂಬಾ ಆಭಾರಿಯಾಗಿದೆ. ಮುಂದೆಯೂ ಈ ಸಹಕಾರವನ್ನು ಅಪೇಕ್ಷಿಸುತ್ತದೆ.

ಈ ವರ್ಷದ ಏಪ್ರಿಲ್-ಸಪ್ಟೆಂಬರ್ ತಿಂಗಳ ಅವಧಿಯಲ್ಲಿ ಬೆಂಗಳೂರು ನಗರದ ದಕ್ಷಿಣ ಭಾಗದಲ್ಲಿ-ಜಯನಗರ, ಜೆ.ಪಿ.ನಗರ, ಕುವೆಂಪುನಗರ, ಬಸವನಗುಡಿ, ವಿವಿಪುರಂ, ಚಾಮರಾಜ ಪೇಟೆ, ಬನಶಂಕರಿ ಮುಂತಾದೆಡೆ ನಡೆಸಬೇಕೆಂಬ ಉದ್ದೇಶವಿದೆ. ಶನಿವಾರ ಮಧ್ಯಾಹ್ನ 3-6 ಗಂಟೆಯವರೆಗೆ ತರಗತಿ ನಡೆಸಲು ತಮ್ಮ ಮನೆಯಲ್ಲಿ ಸ್ಥಳಾವಕಾಶ ಮಾಡಿಕೊಡಲು ಇಚ್ಛೆಯುಳ್ಳ ಯಾರಾದರೂ ಗುರುಕುಲ ಪೋಷಕರು ಮುಂದೆ ಬಂದಲ್ಲಿ ಹಾಗೂ ಆ ಪ್ರದೇಶದ 10-15 ಆಸಕ್ತ ವಿದ್ಯಾರ್ಥಿಗಳು (8-80 ವರ್ಷದ ತ್ರಿಮತಸ್ಥ ಬ್ರಾಹ್ಮಣ ಸಮುದಾಯದ ಬಾಲಕರು, ಪುರುಷರು, ಮಹಿಳೆಯರು) ಗುರುಕುಲದ ಆಡಳಿತ ವರ್ಗದ ವರನ್ನು ಸಂಪರ್ಕಿಸಿ ನೊಂದಾಯಿಸಿಕೊಂಡಲ್ಲಿ ನಿಯೋಜಿತ ಸ್ಥಳದಲ್ಲಿ ಗುರುಕುಲದ ಅಧ್ಯಾಪಕರು ಬಂದು ಉಚಿತವಾಗಿ ತರಗತಿ ಗಳನ್ನು ನಡೆಸಿ ಕೊಡುವರು. ನೊಂದಾವಣೆ ಮಾರ್ಚ್ 26ರ ಮೊದಲು ಮಾಡಿಸಿ ಕೊಳ್ಳಬೇಕು.

ಕರ್ನಾಟಕದ ಇತರ ಜಿಲ್ಲಾ ಕೇಂದ್ರಗಳಲ್ಲಿ-ಮಂಗಳೂರು, ಮೈಸೂರು, ಉಡುಪಿಗಳಲ್ಲಿ ತರಗತಿ ಗಳನ್ನು ನಡೆಸುವ ಅವಕಾಶ, ಸಾಧ್ಯಾಸಾಧ್ಯತೆಯ ಬಗ್ಗೆ ಕೆಲವು ಆಸಕ್ತರು ಗುರುಕುಲವನ್ನು ಸಂಪರ್ಕಿಸಿರುವ ಹಿನ್ನೆಲೆಯಲ್ಲಿ ಬೆಂಗಳೂರಿನ ಹೊರಗೆ ಯಾವುದಾದರೂ ಒಂದು ಜಿಲ್ಲಾ ಕೇಂದ್ರದಲ್ಲಿ ‘ವೇದಶಿಬಿರ’ ಎಂಬ ಹೊಸ ಅಭಿಯಾನವನ್ನು ಪ್ರಯೋಗಾತ್ಮಕವಾಗಿ ನಡೆಸಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿಯಲ್ಲಿ ಒಂದು ಕೇಂದ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ನಾಲ್ಕು ಬಾರಿ ಎರಡು ದಿನಗಳ (ಶನಿವಾರ-ಭಾನುವಾರ) ಶಿಬಿರವನ್ನು ನಡೆಸಲಾಗುವುದು. ಈ ಪಟ್ಟಣಗಳಲ್ಲಿರುವ ಯಾವುದೇ ಸಂಘ, ಸಂಸ್ಥೆಯೂ ಸಜ್ಜನ ಸಹೃದಯರು ‘ಗುರುಕುಲ ಪೋಷಕ’ರಾಗಿ ತಮ್ಮ ಭವನ/ಮನೆಯಲ್ಲಿ ತರಗತಿಗಳನ್ನು ನಡೆಸಲು ಸ್ಥಳಾವಕಾಶ ಮಾಡಿಕೊಟ್ಟಲ್ಲಿ ಹಾಗೆ ಆ ನಗರದ ಸುಮಾರು 15-20 ವಿದ್ಯಾರ್ಥಿಗಳು ವೇದಾಧ್ಯಯನದ ಆಸಕ್ತಿ ತೋರಿದಲ್ಲಿ ಆ ಶಿಬಿರಗಳಲ್ಲಿ ಗುರುಕುಲದ ಅಧ್ಯಾಪಕರು ಗುರುಕುಲದ ಪಾಠ ಪಟ್ಟಿಯ ಸೂಕ್ತಗಳನ್ನು ಅಭ್ಯಾಸ ಮಾಡಿಸುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರ ನಡೆಸುವ ಖರ್ಚನ್ನು ಸ್ಥಳೀಯರೇ ಭರಿಸಬೇಕು. ಶಿಬಿರದ ವ್ಯವಸ್ಥಾಪಕರು/ಪೋಷಕರು/ವಿದ್ಯಾರ್ಥಿ ಸಂಚಾಲಕರು ಈ ವಿಷಯದಲ್ಲಿ ಗುರುಕುಲದ ಆಡಳಿತ ಮಂಡಳಿಯನ್ನು ಸಂಪರ್ಕಿಸಬಹುದು. ಪ್ರಥಮ ಶಿಬಿರ 2 ಮತ್ತು 3 ಅಕ್ಟೋಬರದಂದು, ನೊಂದಾವಣೆ ಆಗಸ್ಟ್ ತಿಂಗಳ ಮೊದಲು ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದವರು :

**ಶ್ರೀಮತಿ ಸಬೀತಾ ಎಸ್.ರಾವ್, ಸಂಚಾಲಕರು (ದೂ.080 23333678) (ರಾತ್ರಿ 7-9 ಗಂಟೆಯವರೆಗೆ)**

**ಶ್ರೀ ಜಿ. ಕೆ. ರಾವ್, ಅಧ್ಯಾಪಕರು (ದೂ.080 23230992) (ರಾತ್ರಿ 8-10 ಗಂಟೆಯವರೆಗೆ)**

*ವಿ.ಸೂ. : ಸಂಸ್ಕೃತ ಜ್ಞಾನ ಅನಿವಾರ್ಯವಲ್ಲ. ಕಂಠಗತ ಮಾಡುವ ಅಗತ್ಯವಿಲ್ಲ. ಕನ್ನಡ ಲಿಪಿಯಲ್ಲಿ ಮುದ್ರಿತ ‘ಸಸ್ವರ ವೇದಮಂತ್ರಾಃ’ ಎಂಬ ಪುಸ್ತಕದ ಮಂತ್ರಗಳನ್ನು ಸಸ್ವರವಾಗಿ ಪಠಣ ಮಾಡುವುದನ್ನು ಕಲಿಸಲಾಗುವುದು.*

॥ ಸಮಸ್ತ ಸನ್ಮಂಗಲಾನಿ ಭವಂತು ॥

# ‘‘ಶ್ರೀಸುಬ್ರಹ್ಮಣ್ಯ ಸಭೆ’ಯ ಕಿರುಪ್ರವಾಸ


**- ಸ್ನೇಹಲತಾ ದಿವಾಕರ್**

ಫೆಬ್ರವರಿ ತಿಂಗಳ ಹದಿನಾಲ್ಕು ಆದಿತ್ಯವಾರ ಬೆಳಿಗ್ಗೆ 7-15 ಗಂಟೆಗೆ ಸದನದಿಂದ ಒಂದು ಬಸ್ ಮತ್ತು ಮಿನಿ ಬಸ್ ಜನರ (ಸುಮಾರು ಎಂಬತ್ತು) ಪ್ರವಾಸ ಮಲ್ಲಿಕಟ್ಟೆ, ಕದ್ರಿದ್ವಾರದ ಮೂಲಕ ಕುಡುಪು ಮಾರ್ಗವಾಗಿ ಹೊರಟಿತು. ಬೆಳಗ್ಗಿನ ಪ್ರಕೃತಿ ಸೌಂದರ್ಯ ಮನೋಹರವಾಗಿತ್ತು. ಪೊಳಲಿ ಮಿಜಾರು (ಶೋಭಾವನ) ಮಾರ್ಗವಾಗಿ ಮೂಡುಬಿದ್ರೆ ಗೌರೀ ದೇವಸ್ಥಾನ ದ್ವಾರ ಮೂಲಕ ನಮ್ಮವರೇ ಆದ ರತ್ನಾಕರ ರಾಯರು ಪೂಜೆ ಮಾಡುವ ‘‘ಶ್ರೀ ದೊಡ್ಮನೆ ಚಂದ್ರಶೇಖರ ಸನ್ನಿಧಾನ’’ಕ್ಕೆ ತಲಪಿದೆವು. ಈ ದೇಗುಲಕ್ಕೆ 600 ವರ್ಷಗಳ ಇತಿಹಾಸವಿದೆ. ಪಕ್ಕದಲ್ಲೇ ಅವರ ಮನೆಯಿದೆ. ಹಿಂದೆ ಕೆರೆಯಿದೆ. 87ನೇ ಇಸವಿಗೆ ಶೃಂಗೇರಿಯ ಗುರುಗಳಾದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಯವರು ಇಲ್ಲಿಗೆ ಮತ್ತು ಅವರ ಮನೆಗೆ ಚಿತ್ತೈಸಿ, ಆಶೀರ್ವದಿಸಿದ್ದಾರೆ. ನಮಗೆಲ್ಲಾ ದೇವಸ್ಥಾನದ ಪೂಜೆ, ಪ್ರಸಾದ ವಾಯಿತು.


ಅಲ್ಲೇ ಮುಂದುಗಡೆ ಸದನದಿಂದ ತಂದ ಬಿಸಿ ಇಡ್ಲಿ, ಸಾಂಬಾರು, ಚಟ್ನಿ, ಪೇಣಿ, ಕಾಫಿ, ಚಾ ಉಪಾಹಾರವಾಯಿತು. ಮುಂದೆ ಶಿರ್ತಾಡಿ ಕಡೆಗೆ ನಮ್ಮ ಪಯಣ. ಅಲ್ಲಿ ಅರ್ಜುನಾಪುರದಲ್ಲಿ ‘ಮಹಾಲಿಂಗೇಶ್ವರ’ ದರ್ಶನ ಪೂಜೆ ಲಡ್ಡು ಪ್ರಸಾದ. ಇಲ್ಲಿ ನಮ್ಮವರೇ ಆದ ಸುದರ್ಶನ ರಾಯರು ಅರ್ಚಕರು.

ಅಲ್ಲಿಂದ ಹೊಸ್ಮಾರಿಗಾಗಿ ನಾರಾವಿ ದಾಟಿ (ದಾರಿಯಲ್ಲಿ ಸುಂದರ ಜೈನ ಮಂದಿರವಿದೆ) ಸುಳಕೇರಿಯ ‘ಶ್ರೀ ಕ್ಷೇತ್ರನಾವರ ಮಹಾಲಿಂಗೇಶ್ವರ’ನ ದರ್ಶನವಾಯಿತು. ಇಲ್ಲಿಗೆ 800 ವರ್ಷಗಳ ಇತಿಹಾಸವಿದೆ. ತೀರ್ಥಮಂಟಪದ ಮೇಲೆ ಮರದ ಕೆತ್ತನೆ (ರಾಶಿಗಳು), ದ್ವಾರದ ಕೆತ್ತನೆ ತುಂಬಾ ಚೆನ್ನಾಗಿದೆ. ದೇವಳವೂ ವಿಶಾಲವಾಗಿ ದೈವ ದೇವರು, ಗಣಪತಿ, ಅನ್ನಪೂರ್ಣೆಯರ ಸಮೇತ ಜೀರ್ಣೋದ್ಧಾರಗೊಂಡು ಸುಂದರವಾಗಿದೆ. ಎಲ್ಲಾ ಕಡೆ ಶಿವರಾತ್ರಿ ಪ್ರಯುಕ್ತ ಅಲಂಕಾರಗೊಂಡು ಅಂದವಾಗಿದೆ. ನಮ್ಮವರೇ ಆದ ನಾರಾಯಣ ರಾಯರು (ಅರ್ಚಕರು) ಭಕ್ತಿ ಶ್ರದ್ಧೆಯಿಂದ ಮಹಾಪೂಜೆ ಮಾಡಿ ಪ್ರಸಾದ ನೀಡಿ ನಮ್ಮನ್ನೆಲ್ಲಾ ಹರಸಿದರು.


ಅಲ್ಲಿಂದ ಕೊಕ್ರಾಡಿ ಎಂದು ಕರೆಸಿಕೊಳ್ಳುವ ಶಾಲಿಪುರಕ್ಕೆ ಬಂದೆವು. ಅಲ್ಲಿಯ ನಾಗಬನ ನೋಡಿಕೊಂಡು, ಮುಕ್ಕಾಲು ಭಾಗ ಕೆಲಸವಾಗಿರುವ ಸುಬ್ರಹ್ಮಣ್ಯ ದೇವಳ ನೋಡಿ ಪಕ್ಕದಲ್ಲಿರುವ ದೇವರ ಪ್ರಸಾದ ದರ್ಶನ ಪಡೆದು ಕೆಳಗೆ ಅಡುಗೆ ಹಾಲ್‌ಗೆ ಬಂದು ಪಾನಕ ಸೇವಿಸಿದೆವು. ಅಲ್ಲಿನ ಅರ್ಚಕರಾದ ಸುಬ್ರಹ್ಮಣ್ಯ ರಾಯರ ಮನೆಯಲ್ಲಿ ತಯಾರಾದ ರುಚಿಯಾದ ಊಟ (ಪಾಯಸ, ಲಾಡು ಸಮೇತ) ಮುಗಿಸಿದೆವು. ಸಂಜೆ ತನಕ ವಿವಿಧ ಕಾರ್ಯಕ್ರಮಗಳು, ಆಟ, ಉಪಾಹಾರ ಎಲ್ಲಾ ಚೆನ್ನಾಗಿ ನಡೆಯಿತು. ಮೂಡಬಿದ್ರೆ ಬಸದಿ ನೋಡಿಕೊಂಡು ನಮ್ಮ ಪಯಣ ಮಂಗಳೂರಿನತ್ತ ಸಾಗಿತು. ದಾರಿಯಲ್ಲಿ ಆಗಾಗ ಚೋಕ್‌ಲೇಟ್, ಕರಿದ ತಿಂಡಿ, ಡ್ರೈಫ್ರುಟ್ಸ್, ಪ್ರಸಾದ ವಿತರಣೆಯಾಯಿತು. ಗುರುಪುರ ಹೊಳೆಯ ಹತ್ತಿರವಂತೂ ಸೂರ್ಯಾಸ್ತಮಾನ ಸುಂದರ ವಾಗಿತ್ತು. ಆ ದಿನ ಪ್ರೇಮಿಗಳ ದಿನಾಚರಣೆ ಯಂತೆ! ಹಲವಾರು ಪ್ರಾಯದ ದಂಪತಿ ಗಳಿದ್ದರು. ಅಲ್ಲಲ್ಲಿ ಸ್ವಲ್ಪ ನಡೆಯಲು ಇತ್ತು. ಹಾಗಾಗಿ ಪಾದಯಾತ್ರೆ, ತೀರ್ಥಯಾತ್ರೆ ಎಲ್ಲಾ ಆಗಿ 7 ಗಂಟೆಯ ಒಳಗೆ ಸದನ ಸೇರಿದೆವು. ಕಿರು ಪ್ರವಾಸ ಚೆನ್ನಾಗಿ ನಡೆದು ಮನ ಮುದಗೊಳಿಸಿತು.




**ಚಂದ್ರಶೇಖರ ದೇವಸ್ಥಾನ ಮೂಡುಬಿದ್ರೆ**



**ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಅರ್ಜುನಾಪುರ, ಶಿರ್ತಾಡಿ**



**ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ನಾವರ, ಸುಳ್ಕೇರಿ**




**ಶ್ರೀ ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ**

**ರೇಖಾಚಿತ್ರ : ರಘುವೀರ್, ಪೆರ್ಡೂರು**

**PRAMOD**
AUTOMOBILES
KARANGALPADY, MANGALORE -575 003.
Ph : 2491723 (0)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. :Ln.K. HARSHA KUMAR

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (0)
**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**
**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಸಂಸ್ಕೃತ ಸುಭಾಷಿತಗಳಲ್ಲಿ ಶ್ಲೇಷೆ



- ವೈ. ಶಂಕರನಾರಾಯಣ ರಾವ್, ಪಡುಬಿದ್ರಿ

ಸುಭಾಷಿತಗಳು ಮಾನವ ಜೀವನಕ್ಕೆ ಬಹಳ ಹತ್ತಿರವಾಗಿದ್ದು ಉತ್ತಮ ಸಂದೇಶಗಳನ್ನು ತಲಪಿಸುತ್ತವೆ. ಇವು ನಮ್ಮ ಆರ್ಷೇಯ ಸಂಸ್ಕೃತಿಗಳಿಂದ ಪ್ರಣೀತವಾಗಿದ್ದು ಅಪಾರವಾದ ಅರಿವು, ಅನುಭವ, ಚಿಕಿತ್ಸಕ ದೃಷ್ಟಿಗಳನ್ನು ಹೊಂದಿವೆ. ಅನುಭವ ಹರಳುಗಟ್ಟಿ, ಶ್ರೀಶಾರದಾ ಮಾತೆ ಕೊರಳಲ್ಲಿ ಧರಿಸಿದ ಮುತ್ತು-ರತ್ನಗಳಿಂದ ಕೋದ ಅನರ್ಘ್ಯ ಹಾರಗಳಾಗಿವೆ; ಆಭರಣಗಳಾಗಿವೆ. ''ಧರ್ಮೋ ಯಶೋ ನಯೋ ದಾಕ್ಷ್ಯಂ ಮನೋಹಾರಿ ಸುಭಾಷಿತಂ। ಇತ್ಯಾದಿಗುಣರತ್ನಾನಾಂ ಸಂಗ್ರಹೀ ನಾವ ಸೀದತಿ'' ॥ (ಧರ್ಮ, ಯಶಸ್ಸು, ನೀತಿ, ದಾಕ್ಷಿಣ್ಯ ಹಾಗೆಯೇ ಮನೋಹರವಾದ ಸುಭಾಷಿತ- ಇವೇ ಮೊದಲಾದ ಗುಣ ರತ್ನಗಳನ್ನು ಶೇಖರಿಸುವವನು ಯಾವಾಗಲೂ ದುಃಖಕ್ಕೊಳ ಗಾಗುವುದಿಲ್ಲ) ಎಂಬುದೊಂದು ಅನುಭಜನ್ಯ ಉಕ್ತಿ. ''ಅರ್ಥಸ್ಯ ನಿಶ್ಚಯೋ ದೃಷ್ಟೋ ವಿಚಾರೇಣ ಹಿತೋಕ್ತಿತಃ। ನ ಸ್ನಾನೇನ ನ ದಾನೇನ ಪ್ರಾಣಾಯಮ ಶತೇನವಾ'' ॥ (ಹಿತೋಕ್ತಿಗಳನ್ನು ಮನನ ಮಾಡುವುದರಿಂದ ನಿಶ್ಚಿತವಾದ ಪರಿಹಾರಗಳು ದೊರಕುತ್ತವೆ. ಸ್ನಾನದಿಂದಾಗಲೀ, ಧ್ಯಾನದಿಂದಾಗಲೀ ನೂರಾರು ಪ್ರಾಣಾಯಾಮಗಳಿಂದಾಗಲೀ ದೊರಕುವುದಿಲ್ಲ. ಈ ಶ್ಲೋಕ ಸುಭಾಷಿತಗಳಿಗಿರುವ ಮಹತ್ವವನ್ನು ಸಾರುತ್ತದೆ.

ಹಲವು ಸುಭಾಷಿತಗಳಲ್ಲಿ ಶ್ಲೇಷೆ (ಎರಡರ್ಥ -Double meaning)ಗಳಿದ್ದು ಇವುಗಳ ಮುಖ್ಯ ಉದ್ದೇಶ ಪರೋಕ್ಷವಾಗಿ ವ್ಯಕ್ತಿಯನ್ನು ತಿದ್ದಿ ಸಮಾಜಮುಖಿಯನ್ನಾಗಿ, ನೀತಿಕೋವಿದನನ್ನಾಗಿ, ಜ್ಞಾನಿಯನ್ನಾಗಿ ಮಾಡುವುದೇ ಆಗಿರುತ್ತದೆ. ಇವುಗಳನ್ನು ಮನುಷ್ಯನೊಳಗೊಂಡ ಸಕಲ ಚರಾಚರ ಪ್ರಾಣಿ-ವಸ್ತುಗಳೊಂದಿಗೆ ನಡೆಸುವ ಸಂಭಾಷಣಾ ರೂಪದಲ್ಲಿಯೋ ಸ್ವಗತರೂಪದಲ್ಲಿಯೋ ರಚಿಸಲಾಗಿದೆ. ಇವುಗಳ ಆಳದಲ್ಲಿರುವ ಅರಿವು, ವ್ಯಂಗ್ಯ, ನೀತಿಗಳು ಮಾರ್ಮಿಕವಾಗಿದ್ದು ನಮ್ಮನ್ನು ಚಿಂತನೆಗೆ ಒಡ್ಡುತ್ತವೆ. ಅಂತಹ ಕೆಲವು ಸುಭಾಷಿತಗಳನ್ನು ಇಲ್ಲಿ ಕನ್ನಡ ತಾತ್ಪರ್ಯ, ಟಿಪ್ಪಣಿ ಸಹಿತ ಕೊಡಲಾಗಿದೆ.

*ಯದ್ವಕ್ತ್ರಂ ಮುಹರೀಕ್ಷಸೇ ನ ಧನಿನಾಂ ಬ್ರೂಷೇ ನ ಚಾಟೂನ್ ಮೃಷಾ*
*ನೈಷಾಂ ಗರ್ವವಚಃ ಶ್ರಣೋಷಿ ನ ಚ ತಾನ್ ಪ್ರತ್ಯಾಶಯಾ ಧಾವಸಿ ।*
*ಕಾಲೇ ಬಾಲತೃಣಾನಿ ಖಾದಸಿ ಪರಂ ನಿದ್ರಾಸಿ ನಿದ್ರಾಗಮೇ*
*ತನ್ಮೇ ಬ್ರೂಹಿ ಕುರಂಗ ಕುತ್ರ ಭವತಾ ಕಿಂ ನಾಮ ತಪ್ತಂ ತಪಃ ॥*

(ಎಲೇ ಜಿಂಕೆ, ನೀನು ಯಾವ ಶ್ರೀಮಂತರ ಮುಖವನ್ನೂ ನೋಡುವುದಿಲ್ಲ; ಅವರೆದುರಿಗೆ ಸುಳ್ಳು ಸುಳ್ಳಾಗಿ ಮುಖಸ್ತುತಿ ಮಾಡುವುದಿಲ್ಲ; ಅವರ ಗರ್ವದ ಮಾತುಗಳನ್ನು ಕೇಳುವುದಿಲ್ಲ; ಆಸೆಯಿಂದ ಶ್ರೀಮಂತರ ಬಳಿಗೆ ಓಡುವುದಿಲ್ಲ. ಆದರೂ ಕಾಲಕ್ಕೆ ಸರಿಯಾಗಿ ಹುಲ್ಲನ್ನು ತಿನ್ನುತ್ತೀಯೆ. ನಿದ್ರೆ ಬಂದಾಗ ಮಲಗುತ್ತಿಯೇ. ಇದು ಹೇಗಾಯಿತು? ಎಲ್ಲಿ ಯಾವ ತಪಸ್ಸನ್ನು ಆಚರಿಸಿದೆ? ನನಗೂ ಹೇಳಿಕೊಡು)

ಈ ಸುಭಾಷಿತದಲ್ಲಿ ಶ್ರೀಮಂತರ ಆಡಂಬರದ, ಕಪಟ ಮುಖವಾಡವನ್ನು ಬಯಲಿಗೆ ಎಳೆಯಲಾಗಿದೆ. ಹಾಗೆಯೇ ಸರಳ ಜೀವನವನ್ನು ನಡೆಸುವವನಿಗಿರುವ ಸುಖ-ಶಾಂತಿ, ನೆಮ್ಮದಿಗಳನ್ನು ಸಾಂಕೇತಿಸಲಾಗಿದೆ.

*ದಾರಿದ್ರ್ಯ! ಶೋಚಾಮಿ ಭವಂತ ಮೇವಂ*
*ಅಸ್ಮಚ್ಛರೀರೇ ಸುಹೃದಿತ್ಯುಪಿತ್ವಾ ।*
*ವಿಪನ್ನದೇಹೇ ಮಯಿ ಮಂದಭಾಗ್ಯೇ*
*ಮಮೇತಿ ಚಿಂತಾ ಕ್ವ ಗಮಿಷ್ಯಸಿ ತ್ವಮ್ ॥*

(ಎಲೇ ಬಡತನವೇ! ನನ್ನ ಶರೀರದಲ್ಲಿ ಗೆಳೆಯನಂತೆ ಬಹಳ ಕಾಲ ಇದ್ದು, ನಾನು ಸತ್ತ ಮೇಲೆ ''ನಿನಗೆ ಆಶ್ರಯ ಕೊಡುವವರಾರು? ಎಲ್ಲಿ ಹೋಗುವಿಯೋ'' ಎಂದು ನನಗೆ ತೀವ್ರ ಚಿಂತೆಯಾಗಿದೆ)

*ಯೇ ಯೇ ಗುಣಿನೋ ಯೇ ಯೇ ಚ*
*ತ್ಯಾಗಿನೋ ಯೇ ವಿದಗ್ಧಜನಾಃ ।*
*ದಾರಿದ್ರ್ಯರೇ ವಿಚಕ್ಷಣ ತೇಷಾಂ ತ್ವಂ*
*ಸಾನುರಾಗಮಸಿ ॥*

(ಎಲೇ ಬಡತನ! ನೀನು ಬಹಳ ಚತುರ. ಒಳ್ಳೆಯ ಗುಣವುಳ್ಳವರನ್ನೂ ತ್ಯಾಗಿಗಳನ್ನೂ, ಪಂಡಿತರನ್ನೂ ಆರಿಸಿಕೊಂಡು ಅವರಲ್ಲಿ ಪ್ರೀತಿಯನ್ನು ತೋರಿಸುತ್ತೀಯೆ!) ಮೇಲಿನ ಮೊದಲನೆಯ ಶ್ಲೋಕದಲ್ಲಿ ಬಡವನೊಬ್ಬನು ತನ್ನ ಬಡತನವನ್ನೇ ಗೇಲಿ ಮಾಡುವಷ್ಟು ನಿರ್ವಿಣ್ಣನಾಗಿ ಶೋಚನೀಯ ಸ್ಥಿತಿಯನ್ನು ತಲಪಿದ್ದಾನೆ. ಇನ್ನೊಂದರಲ್ಲಿ ಬಡತನವು ಆಶ್ರಯಿಸುವ ಗುಣಿಗಳ ಪಟ್ಟಿಯನ್ನು ಮಾಡಲಾಗಿದೆ.

*ತುಲ್ಯೈವ ರೂಪರಚನಾ ಗಣನಾಪಿ ಧಾತು-*
*ಮಧ್ಯೇ ಸಮೈವ ಸಮತಾ ಘಟಿತೇ ತಥಾಪಿ ।*
*ಹೇಮ್ನಾ ಸಮಂ ನ ದಹನೇ ಪ್ರವಿಶಾರಕೂಟ*
*ವ್ಯಕ್ತೀ ಭವಿಷ್ಯತಿ ಯತೋ ಭವತೋ ವಿಶೇಷಃ ॥*

(ಎಲೇ ಹಿತ್ತಾಳೆಯೇ, ನಿನ್ನ ರೂಪವು ನೋಡಲು ಚಿನ್ನದಂತಿದೆ. ಲೋಹದ ಮಧ್ಯದಲ್ಲಿ ನಿನಗೂ ಗಣನೆಯುಂಟು. ಆದರೆ ಚಿನ್ನದ ಜೊತೆಗೆ ನೀನೂ ಸತ್ವಪರೀಕ್ಷೆಗಾಗಿ ಬೆಂಕಿಯಲ್ಲಿ ಬೀಳಬೇಡ. ಏಕೆಂದರೆ ಬೆಂಕಿಯಲ್ಲಿ ನಿನ್ನ ಸ್ವರೂಪ ವಿಶೇಷವು ಗೊತ್ತಾಗಿಬಿಡುತ್ತದೆ!) ಈ ಸುಭಾಷಿತವು ನಿಶಿತಮತಿಗಳೊಂದಿಗೆ, ವಿದ್ವಾಂಸರುಗಳೊಂದಿಗೆ ಸ್ಪರ್ಧಿಸಲು, ವಾದಿಸಲು ಬಯಸುವ ಪಾಮರರಿಗೆ ಒಂದು ಎಚ್ಚರಿಕೆಯ ಘಂಟಾನಾದದಂತಿದೆ.

*ನನ್ವಾಶ್ರಯಸ್ಥಿತಿರಿಯಂ ತವಕಾಲಕೂಟ*
*ಕೇನೊತ್ತರೋತ್ತರವಿಶಿಷ್ಟಪದೊಪದಿಷ್ಟಾ ।*
*ಪ್ರಾಗರ್ಣವಸ್ಯ ಹೃದಯೇ ವೃಷಲಕ್ಷ್ಮಣೋಽಥ*
*ಕಂಠೇಽಧುನಾ ವಸಸಿ ವಾಚಿ ಪುನಃ*
*ಖಲಾನಮ್ ॥*

(ಎಲೇ ಕಾಲಕೂಟ ವಿಷವೇ! ನೀನು ಮೆಟ್ಟಿಲು ಮೆಟ್ಟಿಲಾಗಿ ಹೆಚ್ಚು ಉತ್ತಮವಾದ ನೆಲೆಯನ್ನಾರಿಸಿಕೊಂಡಿದ್ದೀಯೆ! ನಿನಗೆ ಇದನ್ನು ಹೇಳಿಕೊಟ್ಟವರಾರು? ಮೊದಲು ನೀನು ಸಮುದ್ರದ ನಡುವೆ ಇದ್ದೆ. ಆ ಮೇಲೆ ಈಶ್ವರನ ಕಂಠವನ್ನು ಸೇರಿದೆ. ಈಗ ದುಷ್ಟರ ಮಾತಿನಲ್ಲಿರುವೆ!) ಇಲ್ಲಿ ದುಷ್ಟರ ಮತ್ಸರದ ವಿಷಪೂರಿತ ಮಾತುಗಳನ್ನು ವ್ಯಂಗ್ಯಕ್ಕೆ ಈಡು ಮಾಡಲಾಗಿದೆ.

*ತಾವಕ್ಕೋಕಿಲ ವಿರಸಾನ್ ಯಾಪಯ*
*ದಿವಸಾನ್ ವನಾಂತರೇ ನಿವಸನ್ ।*
*ಯಾವನ್ಮಿಳದಳಿಮಾಲಃ ಕೋಽಪಿ*
*ರಸಾಲಃ ಸಮುಲ್ಲಸತಿ ॥*

(ಎಲೇ ಕೋಗಿಲೆ! ನೀರಸವಾದ ಈ ಕೆಲವು ದಿವಸಗಳನ್ನು ಯಾವುದಾದರೂ ಕಾಡಿನ ಮೂಲೆಯಲ್ಲಿ ಕಳೆ. ಒಂದಿಲ್ಲೊಂದು ದಿವಸ ಪರಿಮಳದಿಂದ ದುಂಬಿಗಳ ಹಿಂಡನ್ನೇ ಸೆಳೆಯುವ, ಮಾವು ಅರಳುವ ವಸಂತವು ಬಂದೇ ಬರುತ್ತದೆ. ಕಷ್ಟ ಕಾಲವನ್ನು ಹೇಗಾದರೂ ಕಳೆ. ಆನಂದವನ್ನು ಕೊಡುವ ಸಮಯವು ಜೀವನದಲ್ಲಿ ಬಂದೇ ಬರುತ್ತದೆ.) ಒದಗಿ ಬರುವ ಕಷ್ಟಗಳನ್ನು ಸಹನೆಯಿಂದ ಎದುರಿಸಿದರೆ ಮುಂದೆ ಸುಖದ ದಿನಗಳನ್ನು ಕಾಣಬಹುದು ಎಂಬುದೇ ಇಲ್ಲಿಯ ತಾತ್ಪರ್ಯವಾಗಿದೆ.

*ಅಧಃಕರೋಽಪಿ ರತ್ನಾನಿ ಮೂರ್ಧ್ನಾ ಧಾರಯಸೇ*
*ತೃಣಂ ।*
*ದೋಷಸ್ತವೈವ ಪಾಥೋದೇ ರತ್ನಂ ರತ್ನಂ ತೃಣಂ*
*ತೃಣಂ ।*

(ಎಲೇ ಸಮುದ್ರವೇ! ರತ್ನಗಳನ್ನು ಕೆಳಕ್ಕೆ ತಳ್ಳಿ ಹುಲ್ಲನ್ನು ತಲೆಯ ಮೇಲೆ ಧರಿಸುತ್ತೀಯೆ. ಇದು ನಿನ್ನದೇ ತಪ್ಪು. ರತ್ನ ರತ್ನವೇ, ಹುಲ್ಲು ಹುಲ್ಲೇ.) ಉತ್ತಮರು ಸಜ್ಜನರನ್ನು ದೂರವಿರಿಸಿ ದುರ್ಜನರ ಸಂಗವನ್ನು ಮಾಡಬಾರದೆಂಬುದೇ ಇಲ್ಲಿಯ ಆಶಯವಾಗಿದೆ.

*ಕರ್ಣೌ ಕೀಲಕಸನ್ನಿಭೈರ್ನವನವೈರುದ್ವೇಜ*
*ಯಂತಂ ರವೈಃ*
*ಆಚಾಮಂತಮನುಕ್ಷಣಂ ತನುಭೃತಾಂ*
*ಪ್ರಾಣಾಯಿತಂ ಶೋಣಿತಂ ।*
*ಯತ್ನೇನಾಪಿ ಗರೀಯಸಾ ನ ಮಶಕ*
*ತ್ರಸ್ಯಂತಮಸ್ತ್ರಾಧಿಕಂ*
*ತ್ವಾಮತ್ಯಲ್ಪಕಳೇವರಂ ಕೃತವತಾ ಧಾತ್ರಾ*
*ಜಗದ್ರಕ್ಷಿತಮ್ ॥*

(ಎಲೇ ಸೊಳ್ಳೆಯೇ, ಮೊಳೆಗಳಿಂದ ಚುಚ್ಚಿದ ಹಾಗೆ ಒರಟು ಧ್ವನಿಯಿಂದ ಕಿವಿಗಳನ್ನು ಬೇಸರಗೊಳಿಸುತ್ತೀಯೆ. ಪ್ರಾಣಿಗಳ ಪ್ರಾಣದಂತಿರುವ ರಕ್ತವನ್ನು ಹೀರುತ್ತೀಯೆ. ಎಷ್ಟೇ ಮಹತ್ತಾದ ಪ್ರಯತ್ನದಿಂದಲೂ ನಿನ್ನನ್ನು ಹೆದರಿಸಲು ಸಾಧ್ಯವಿಲ್ಲ. ಅಸ್ತ್ರಕ್ಕಿಂತಲೂ ನಿನ್ನ ಕಚ್ಚುವಿಕೆ ಭಯಂಕರ. ಆದರೆ ಬ್ರಹ್ಮನು ನಿನ್ನನ್ನು ಸಣ್ಣದಾಗಿ ಸೃಷ್ಟಿಸಿ ಜಗತ್ತನ್ನು ಕಾಪಾಡಿದ್ದಾನೆ) ಇಲ್ಲಿ ದುಷ್ಟರನ್ನು, ಸಮಾಜ ಕಂಟಕರನ್ನು ನೆತ್ತರು ಹೀರುವ ಸೊಳ್ಳೆಗಳಿಗೆ ಹೋಲಿಸಿ ಅವರ ಸಂಖ್ಯೆ ಅಲ್ಪವಾಗಿರುವುದಕ್ಕೆ ಸಮಾಧಾನ ವ್ಯಕ್ತಪಡಿಸಲಾಗಿದೆ.

*ಗರ್ಜ ಗ್ರಾಮ್ಯಗ್ರಹಾಂಗಣೇಷು ವಿಹರ ಸ್ವೈರಂ*
*ವನೇನಿರ್ಜನೇ*
*ನದ್ಯಾಃ ಕೂಲಮಕಾಂಡ ಮುತ್ಖನ ಮುದಾ*
*ವರ್ತಸ್ವ ದುರ್ವೃತ್ತಿಪು ।*
*ಗೋಷ್ಠಾದಿಷ್ಠಿತ ಗರ್ವಸಾರ ಸುರಭಿಪ್ರಾಣೇಶ*
*ದುರ್ಗೇ ಪಥಿ*
*ದ್ರಷ್ಟವ್ಯಃ ಖಲು ಪೃಷ್ಠಲಂಬಿನಿ ಭರೇ*
*ಭೂಯಾನಯಂ ತೇಮದಃ ॥*

(ಎಲೇ ಎತ್ತೇ! ಹಳ್ಳಿಯ ಮನೆಗಳ ಅಂಗಳಗಳಲ್ಲಿ ಗುಟುರು ಹಾಕು. ಸ್ವೇಚ್ಛೆಯಾಗಿ ಜನರಿಲ್ಲದ ಕಾಡಿನಲ್ಲಿ ಓಡಾಡು. ಕಾರಣವಿಲ್ಲದೇ ನದಿಯ ದಡವನ್ನು ಕೊಂಬುಗಳಿಂದ ಕೆಡವು. ಬೇಕಾದ ಹಾಗೆ ಕೆಟ್ಟ ಅಭ್ಯಾಸಗಳನ್ನು ಮಾಡಿ ನಲಿ. ನೀನು ಹಸುಗಳ ದೊಡ್ಡಿಗೆ ಒಡೆಯ. ಹಸುಗಳಿಗೆ ಪ್ರಿಯ. ಗರ್ವವೇ ನಿನ್ನ ದೊಡ್ಡ ಗುಣ. ಆದರೆ ಕಠಿಣವಾದ ದಾರಿಯಲ್ಲಿ ಬೆನ್ನಿನ ಮೇಲೆ ಭಾರ ಹೊತ್ತು ನಡೆಯುವಾಗ ನಿನ್ನ ಗರ್ವವೆಲ್ಲಿರುತ್ತದೆ. ಹೇಳು ನೋಡೋಣ.) ಮದಭರಿತರಾದ ವ್ಯಕ್ತಿಗಳು ಶಿಕ್ಷೆಯನ್ನು ಅನುಭವಿಸುವಂತಾದರೆ ಅವರ ಪಾಡು ಹೇಗಿರುತ್ತದೆ ಎಂದು ಸಾಂಕೇತಿಕವಾಗಿ ಇಲ್ಲಿ ಹೇಳಲಾಗಿದೆ.

*ವಾಗ್ದೇವ್ಯಾ ಸಹ ಸಖ್ಯಮಾಚರ ಮಹ*
*ಬ್ರಹ್ಮಾಣಮಾವಿಷ್ಕುರು*
*ಪ್ರಾವಿಣ್ಯಂ ಗತಿಪು ಪ್ರದರ್ಶಯ ನಿಜಂ*
*ವಿದ್ಯಾಬಲಂ ನಿರ್ಮಲಂ ।*
*ಮೀನಂ ಮಾ ಸ್ಮೃಶ ಮೌಕ್ತಿಕಂ ಕವಲಯ ಕ್ರೀಡ*
*ದ್ರುತಂ ದ್ಯಾಸ್ತಲೇ*
*ಚೇದವ್ರೀಡ ಬಕಾಧಮ ಪ್ರತಿಭಯಾ*
*ಹಂಸತ್ವಮಾಕಾಂಕ್ಷಸಿ ಹಂಸತ್ವ ಮಾಕಾಂಕ್ಷಸಿ ॥*

(ಎಲೇ ಕೊಕ್ಕರೆ! ನಿನಗೆ ಹಂಸವಾಗ ಬೇಕೆನ್ನುವ ಹಂಬಲವಿದೆ. ಆದರೆ ಅದಕ್ಕಾಗಿ ನೀನೇನು ಮಾಡಬೇಕು ಗೊತ್ತೆ! ಸರಸ್ವತಿಯೊಂದಿಗೆ ಸ್ನೇಹ ಬೆಳೆಸಬೇಕು. ಬ್ರಹ್ಮನನ್ನು ಬೆನ್ನಿನ ಮೇಲೆ ಹೊರಬೇಕು. ನಿನ್ನ ನಡಿಗೆಯಲ್ಲಿ ಕುಶಲತೆಯನ್ನು ತೋರಬೇಕು. ನಿನ್ನ ವಿದ್ಯಾಬಲವನ್ನು ಹೆಚ್ಚಿಸಿಕೊಳ್ಳಬೇಕು. ಮೀನನ್ನು ತಿನ್ನಬಾರದು. ಮುತ್ತನ್ನು ತಿನ್ನಬೇಕು. ಆಕಾಶದಲ್ಲಿ ವಿಹರಿಸಬೇಕು. ನಾಚಿಕೆಯಿಲ್ಲದ ಅಧಮ ಕೊಕ್ಕರೆಯೇ ಈ ರೀತಿಯಾದ ಪ್ರತಿಭೆಯಿದ್ದರೆ ಹಂಸವಾಗಲು ಪ್ರಯತ್ನಿಸು). ಇಲ್ಲಿ ಉನ್ನತ ಸ್ಥಾನವನ್ನು ಹೊಂದುವ ಹಂಬಲವೊಂದಿದ್ದರೆ ಸಾಲದು. ಅದಕ್ಕೆ ಅರ್ಹತೆಯನ್ನೂ ಪಡೆದಿರಬೇಕು ಎಂಬ ಆಶಯವಿದೆ.

*ವಿಪ್ರಾಸ್ಮಿನ್ನಗರೇ ಮಹಾನ್ ಕಥಯ*
*ಕಸ್ತಾಲದ್ರುಮಾಣಾಂ ಗಣಃ*
*ಕೋ ದಾತಾ, ರಜಕೋ ದದಾತಿ ವಸನಂ*
*ಪ್ರಾತರ್ಗಹೀತ್ವಾ ನಿಶೀ ।*
*ಕೋ ದಕ್ಷಃ, ಪರದಾರವಿತ್ತಹರಣೇ ಸರ್ವೋಽಪಿ*
*ದಕ್ಷೋ ಜನಃ*
*ಕಸ್ಮಾಜ್ಜೀವಸಿ ಹೇ ಸಖೇ, ವಿಷಕೃಮಿನ್ಯಾಯೇನ*
*ಜೀವಾಮ್ಯಹಮ್ ॥*

(ಪ್ರಶ್ನೆ : ಅಯ್ಯಾ ಬ್ರಾಹ್ಮಣ! ಈ ಊರಲ್ಲಿ ದೊಡ್ಡವರಾರು? ಹೇಳು! ಉತ್ತರ : ತಾಲ ವೃಕ್ಷಗಳು. ಪ್ರಶ್ನೆ : ಇಲ್ಲಿ ದಾತೃಗಳು ಯಾರು? ಉತ್ತರ : ಅಗಸನು ಬೆಳಿಗ್ಗೆ ತೆಗೆದುಕೊಂಡ ಬಟ್ಟೆಗಳನ್ನು ರಾತ್ರಿ ಕೊಡುತ್ತಾನೆ. ಪ್ರಶ್ನೆ : ಇಲ್ಲಿ ಯಾರು ಸಮರ್ಥರು? ಉತ್ತರ : ಎಲ್ಲರೂ ಇತರರ ಹೆಂಡತಿ ಹಣಗಳನ್ನು ಅಪಹರಿಸುವುದರಲ್ಲಿ ಗಟ್ಟಿಗರು. ಪ್ರಶ್ನೆ : ಹಾಗಾದರೆ ನೀನು ಹೇಗೆ ಬದುಕಿದ್ದೀಯೆ? ಉತ್ತರ : ವಿಷದಲ್ಲಿ ಹುಳುವಿನಂತೆ ಬದುಕಿದ್ದೇನೆ.) ಈ ಸುಭಾಷಿತದಲ್ಲಿರುವ ಆಶಯ, ವ್ಯಂಗ್ಯ ಸ್ವಯಂ ವೇದ್ಯ. ಭ್ರಷ್ಟ ಅಧಿಕಾರಿಗಳಿಂದ, ಸಮಾಜ ಸೇವಕರ ಮುಖವಾಡವನ್ನು ಧರಿಸಿರುವ ಗೋಸುಂಬೆ, ಸ್ವಾರ್ಥಿ ರಾಜಕಾರಣಿಗಳಿಂದ ತುಂಬಿರುವ ಈ ಸಮಾಜದಲ್ಲಿ ನಾವು ವಿಷದಲ್ಲಿ ಹುಳುವಿನಂತೆ ಬದುಕುತ್ತಿದ್ದೇವೆ. ಅಲ್ಲವೇ?

*ಉಷ್ಟ್ರಾಣಾಂಚ ವಿವಾಹೇಷು ಗೀತಂ ಗಾಯಂತಿ*
*ಗರ್ದಭಾಃ*
*ಪರಸ್ಪರಂ ಪ್ರಶಂಸಂತಿ ಆಹೋ ರೂಪಮಹೋ*
*ಧ್ವನಿಃ ॥*

(ಒಂಟೆಗಳ ಮದುವೆಗಳಲ್ಲಿ ಕತ್ತೆಗಳು ಸಂಗೀತ ಹಾಡುತ್ತವೆ. ಪರಸ್ಪರ ಹೀಗೆ ಹೊಗಳಿಕೊಳ್ಳುತ್ತವೆ. ''ಆಹಾ ಏನು ರೂಪ! ಆಹಾ ಎಷ್ಟು ಇಂಪಾದ ಧ್ವನಿ!)'' ಈ ಸುಭಾಷಿತವು ನಮ್ಮ ಇಂದಿನ ಸಮಾಜದಲ್ಲಿ ಗುಂಪುಗಳನ್ನು ರಚಿಸಿಕೊಂಡು, ಕೂಟಗಳನ್ನು ಕಟ್ಟಿಕೊಂಡು ಪರಸ್ಪರ ಹೊಗಳಿಕೊಳ್ಳುವ ಬುದ್ಧಿಜೀವಿಗಳನ್ನು, ಸಾಹಿತಿಗಳನ್ನು, ಲೇಖಕರನ್ನು ನೆನಪಿಸಿ ಕೊಡುವುದಿಲ್ಲವೇ?

*ನಿತರಾಂ ನೀಚೋಽಸ್ಮೀತಿ ತ್ವಂ ಖೇದಂ ಕೂಪ*
*ಮಾ ಕದಾಪಿ ಕೃಥಾಃ ।*
*ಅತ್ಯಂತ ಸರಸಹೃದಯೋ ಯತಃ ಪರೇಷಾಂ*
*ಗಣಗ್ರಹೀತಾಽಸಿ ॥*

(ಎಲೇ ಭಾವಿಯೇ! ನೀನು ನೀಚ ಅಂದರೆ ಬಹಳ ಕೆಳಗೆ ಇರುವೆನು ಎಂದು ಎಂದಿಗೂ ವ್ಯಥೆಪಡಬೇಡ. ನಿನ್ನ ಹೃದಯವು ದಯಾರ್ದ್ರವಾಗಿದೆ. ಅಲ್ಲದೆ ನೀನು ಬೇರೆಯವರ ಗುಣವನ್ನು ತಿಳಿಯುವವನಾಗಿದ್ದೀಯೆ. ನಿನ್ನಲ್ಲಿ ನೀರಿದೆ, ಹಗ್ಗವನ್ನು ಒಳಗೆ ತೆಗೆದುಕೊಳ್ಳುತ್ತೀಯೆ.) ಕೆಳಮಟ್ಟದವನೂ ಸಹ ಕರುಣಾಳುವೂ ಗುಣಗ್ರಾಹಿಯೂ ಆಗಿರುವಾಗ ಅವನೂ ಉತ್ತಮನೇ ಎಂಬುದು ಇಲ್ಲಿಯ ಭಾವ.

ಸುಭಾಷಿತಗಳಲ್ಲಿರುವ ವಿಚಾರಗಳು ಸಾರ್ವಕಾಲಿಕವಾಗಿ ಪ್ರಸ್ತುತವಾಗಿರುವವು. ಅಲ್ಲದೆ ಜ್ಞಾನ ಭಂಡಾರವನ್ನು ತುಂಬುವ ಮುತ್ತುರತ್ನಗಳ ಖನಿಗಳು. ಇವು ವ್ಯಕ್ತಿಗಳನ್ನು ಹದಗೊಳಿಸಬಲ್ಲ, ಅಂತಃಸ್ಸತ್ವವನ್ನು ವೃದ್ಧಿಸುವ ಗುಪ್ತಗಾಮಿನಿಗಳು. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಸುಲಭ ಬೆಲೆಯ ''ಸುಭಾಷಿತ ಮಂಜರೀ'' ಪುಸ್ತಕದಲ್ಲಿ ಇಂತಹ 2000ಕ್ಕೂ ಹೆಚ್ಚು ಸುಭಾಷಿತಗಳಿದ್ದು ಇದು ಮನೆ-ಮನೆಗಳಲ್ಲಿಯೂ ಸಂಗ್ರಹಿಸಿ ಅಧ್ಯಯನ ಮಾಡಲು ಯೋಗ್ಯವಾಗಿದೆ.

# "ಹರಿಕಥೆ" ಅಪೇಕ್ಷಿತವೇ? ಅನಪೇಕ್ಷಿತವೇ?-೧



- ಹರಿದಾಸ ಮ.ನಾ.ಹೆಬ್ಬಾರ, ಎಂ.ಎ., ಬಿ.ಎಡ್.

"ದಾಸರ ನಿಂದಿಸಬೇಡ, ಮನುಜ ನೀ, ಹರಿದಾಸರ ನಿಂದಿಸಬೇಡ" ಎಂದು ಕೀರ್ತನಕಾರರು ಅಥವಾ ದಾಸ ಪಂಥದವರು ಹಾಡಿದರು. ಕನ್ನಡ ಸಾಹಿತ್ಯದಲ್ಲಿ ಗದ್ಯಸಾಹಿತ್ಯ, ಪದ್ಯ ಸಾಹಿತ್ಯ, ವಚನ ಸಾಹಿತ್ಯ, ಚಂಪೂ ಸಾಹಿತ್ಯಗಳಿರುವಂತೆಯೇ ದಾಸ ಸಾಹಿತ್ಯಕ್ಕೂ ಉತ್ತಮ ಸ್ಥಾನವಿದೆ. ವಚನ ಸಾಹಿತ್ಯದಲ್ಲಿ ಗದ್ಯವೂ ಅಲ್ಲದ ಪದ್ಯವೂ ಅಲ್ಲದ, ಗದ್ಯದಂತೆಯೇ ಸರಾಗವಾಗಿ ಓದಬಹುದಾದ, ಪದ್ಯದಂತೆ ರಾಜವತ್ತಾಗಿ ಹಾಡಬಹುದಾದ ವಚನಗಳನ್ನು ರಚಿಸಿ ಅಂತಹ ಒಂದು ಪ್ರಕಾರವನ್ನೇ ಕನ್ನಡ ಸಾಹಿತ್ಯಕ್ಕೆ ವಚನಕಾರರು ಕೊಡುಗೆಯಾಗಿತ್ತರು. ಬಸವಣ್ಣ, ಅಲ್ಲಮ ಪ್ರಭು, ದಾಸಿಮಯ್ಯ, ಮಹಾದೇವಿ ಅಕ್ಕ ಮುಂತಾದವರು ಈ ಪಂಥದ ಪ್ರಮುಖರು. ಸರ್ವಜ್ಞನು ತ್ರಿಪದಿಯ ಮೂಲಕ ವೇದೋಪನಿಷತ್ತುಗಳ ಸಾರಸರ್ವಸ್ವವನ್ನಿತ್ತರೆ ಈ ತ್ರಿಪದಿಗಳನ್ನು ಸಾಹಿತ್ಯಕಾರರು 'ವಚನ'ಗಳೆಂದೇ ಕರೆದರು. ಗದ್ಯ ಮತ್ತು ಪದ್ಯ ಮಿಶ್ರವಾಗಿರುವ ಚಂಪೂ ಪ್ರಕಾರವನ್ನು ಹಳೆಗನ್ನಡದ ಪ್ರಮುಖ ಕವಿಗಳ ಸಾಹಿತ್ಯ ಮಾಧ್ಯಮವಾಯಿತು. ಅಂತೆಯೇ ಮಧ್ಯಯುಗೀನ ಕನ್ನಡ ಸಾಹಿತ್ಯದಲ್ಲಿ ಹರಿಭಕ್ತರು, ದಾಸವರೇಣ್ಯರು ಕೀರ್ತನೆಗಳ ಮೂಲಕ ವಿಫುಲವಾದ ಸಾಹಿತ್ಯವನ್ನೇ ಸೃಷ್ಟಿಸಿ ಸಾಹಿತ್ಯ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟು ಮಾಡಿದರು. ವಾದಿರಾಜರಿಂದ ಆರಂಭಿಸಿ ಜಗನ್ನಾಥದಾಸರು, ವಿಠಲದಾಸರು, ಪುರಂದರ-ಕನಕರು ಈ ದಾಸ ಸಾಹಿತ್ಯದ ಪ್ರಮುಖರು. ಇವರಿಂದ ಕನ್ನಡ ಸಾಹಿತ್ಯದೊಂದಿಗೆ ಸಂಗೀತ ಕ್ಷೇತ್ರಕ್ಕೂ ಕೊಡುಗೆಗಳು ಸಂದಿವೆ. ಇವರ ಕೀರ್ತನೆಗಳು ಕನ್ನಡ ಸಾಹಿತ್ಯದ 'ವಠಾಕ್ಕ'ಗಳು. ತಿಳಿಹಾಸ್ಯ, ವಿಡಂಬನೆ, ಸ್ತುತಿನಿಂದೆ, ನಿಂದ್ಯಸ್ತುತಿ, ಅನ್ಯಾರ್ಥ ಪ್ರಧಾನ, ನೇರ ಸ್ತುತಿ ಇತ್ಯಾದಿ ಪ್ರಕಾರಗಳನ್ನು ನಾವು ಈ ಕೀರ್ತನೆಗಳಲ್ಲಿ ಕಾಣಬಹುದು. ಉದಾ: "ತೊರೆದು ಜೀವಿಸಬಹುದೆ ಹರಿ ನಿನ್ನ ಚರಣಗಳು" ಎಂದು ನೇರಾಗಿ ಸ್ತುತಿಸಿದರೆ; "ಆರು ಬದುಕಿದರಯ್ಯ ಹರಿ ನಿನ್ನ ನಂಬಿ" ಎಂಬ ನಿಂದ್ಯಸ್ತುತಿಯನ್ನು ಕಾಣಬಹುದು. ಹಾಗಾಗಿ ಈ ಕೀರ್ತನೆಗಳು ಸಾರ್ವಕಾಲಿಕ ಮೌಲ್ಯಗಳನ್ನು ಹೊಂದಿದ್ದು ಕನ್ನಡ ಸಾಹಿತ್ಯದಲ್ಲಿ ಉತ್ತಮ ಸ್ಥಾನವನ್ನು ಪಡೆದಿವೆ.

ಇಂತಹ ಕೀರ್ತನೆಗಳನ್ನು ರಚಿಸಿದ ದಾಸರನೇಕರು ಆ ಕಾಲದಲ್ಲಿ ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು, ಕೈಯಲ್ಲಿ ತಂಬೂರಿಯನ್ನೋ, ಚಿಟಿಕಿ ಯಾ ತಾಳವನ್ನೋ ಹಿಡಿದು ಊರೂರು ಸುತ್ತುತ್ತಾ ಸಮಾಜದ ವಿವಿಧ ಸ್ತರಗಳ ಜನಗಳನ್ನು ಅಲ್ಲಲ್ಲಿ ಕಂಡು ಅವರೆದುರಿಗೆ ದೇವರ ನಾಮಗಳನ್ನೂ, ಕೀರ್ತನೆಗಳನ್ನೂ ಹಾಡುತ್ತಾ ಜನ-ಮನ- ರಂಜನೆಯೊಂದಿಗೆ ಧರ್ಮ ಪ್ರಚಾರವನ್ನೂ, ದೇವರ ಮಹಿಮೆಯ ಹೊಗಳಿಕೆಯನ್ನೂ ಮಾಡುತ್ತಿದ್ದರು. ಈ ಕಾರ್ಯವೇ 'ಹರಿಕೀರ್ತನೆ'ಯೆಂದೂ, 'ಹರಿಕಥೆ'ಯೆಂದೂ ಪ್ರಖ್ಯಾತ ವಾಯಿತು. ಬರ ಬರುತ್ತಾ ಇದು ಧರ್ಮ ಪ್ರಸಾರದ, ಪುರಾಣ ಕಥೆಗಳ ಉದಾತ್ತೀಕರಣದ ಮಾರ್ಗವೇ ಆಗಿ 'ಹರಿಕಥೆ'ಯೆಂಬ ಪ್ರಕಾರವೇ ಹುಟ್ಟು ಹಾಕಲ್ಪಟ್ಟಿತು. ದ್ರಾವಿಡ ಭಾಷೆಗಳಾದ ತುಳು, ತಮಿಳು, ಮಲಯಾಳಿ ಮತ್ತು ತೆಲುಗುಗಳಲ್ಲೂ ಸಹಾ ಈ ಹರಿಕಥೆಯ ಪ್ರಕಾರಗಳು ಬೆಳೆದು ಬಂದಿವೆ. ಕನ್ನಡದಲ್ಲಂತೂ ಪುರಾಣ ಪುರುಷನೂ, ದೇವಾಧಿದೇವನೂ ಆದ ಶ್ರೀಹರಿಯನ್ನೆ ಮುಖ್ಯವಾಗಿರಿಸಿಕೊಂಡು ಕಥೆಗಳು ಹೇಳಲ್ಪಡುತ್ತಿದ್ದುದರಿಂದ ಈ ಪ್ರಕಾರವು 'ಹರಿಕಥೆ'ಯೆನಿಸಿತು. ಕ್ರಮೇಣ ಈ ಕಥೆಯು ಹರನನ್ನೋ, ಶಕ್ತಿಯನ್ನೋ ಇತರ ದೈವಗಳನ್ನೋ, ಚಾರಿತ್ರಿಕ ವ್ಯಕ್ತಿ-ಸನ್ನಿವೇಶಗಳನ್ನೊ, ಸಾಮಾಜಿಕ ವಿಷಯಗಳನ್ನೊ ಕುರಿತಾಗಿದ್ದರೂ ಅದು ಜನ ಬಳಕೆಯಲ್ಲಿ 'ಹರಿಕಥೆ'ಯೇ ಆಯಿತು. ಊರ ಹೊರಗಿರುವ ಆಂಜನೇಯನ, ದುರ್ಗಿಯ, ಶಿವನ, ಕಾಳಿಯ ಮಂದಿರಗಳೇ ಇಂತಹ ಹರಿಕಥೆಗಳ ಕೇಂದ್ರಗಳಾದವು. ಭಗವದ್ಭಕ್ತರು ಸಂಗೀತ-ಸಾಹಿತ್ಯ ಪ್ರಿಯರು ಇವರುಗಳೆಲ್ಲಾ ಇದಕ್ಕೆ ಪ್ರೇಕ್ಷಕರೂ, ಪೋಷಕರೂ ಆದರು.

(ಮುಂದುವರಿಯುವುದು)

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ| ಪ್ರೊ| ಗುರುರಾಜ ಭಟ್ಟರ ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

**ಸ್ಕಂದ ಪುರಾಣದ ವಿಹಂಗಮ ನೋಟ :**

ಸ್ಕಂದ ಪುರಾಣವು ಅಷ್ಟಾದಶ ಪುರಾಣಗಳಲ್ಲಿ ಸೇರಿದ ಗ್ರಂಥವಾಗಿದೆ. ಆದರೆ ಸ್ಕಂದ ಪುರಾಣವೆಂಬ ಸ್ವತಂತ್ರ ಗ್ರಂಥವು ಈಗ ದೊರೆಯುವುದಿಲ್ಲ. ಈ ಗ್ರಂಥದಲ್ಲಿ ಅನೇಕ ಸಂಹಿತೆಗಳು, ಅನೇಕ ಖಂಡಗಳು ಮತ್ತು ಅನೇಕ ಮಹಿಮೆಗಳು ಪ್ರಸಿದ್ಧವಾಗಿವೆ. ಈ ಎಲ್ಲಾ ಸಂಹಿತೆಗಳು, ಖಂಡಗಳು, ಮಹಿಮೆಗಳು ಈಗಿರುವ ಸ್ಕಂದ ಪುರಾಣವೆಂದು ಪ್ರಚಲಿತ ವಾಗಿದೆ. ಆದರೆ ಈ ಖಂಡಗಳಲ್ಲಿ ಯಾವುದು ಮುಂದೆ, ಯಾವುದು ಹಿಂದೆ ಮತ್ತು ಯಾವ ಮಹಿಮೆಯು ಯಾವ ಸಂಹಿತೆಯಲ್ಲಿದೆ ಎಂದು ನಿಶ್ಚಯಿಸುವುದು ಸುಲಭವಲ್ಲ.

ಸ್ಕಂದ ಪುರಾಣದ ಶಂಕರ ಸಂಹಿತೆಯ ಪ್ರಕಾರ: ವೇದದ ಸಾರದಿಂದ ಸಂಗ್ರಹವಾದ ಸ್ಕಂದ ಪುರಾಣವು ಆರು ಸಂಹಿತೆಗಳು ಮತ್ತು ಐವತ್ತು ಖಂಡಗಳಲ್ಲಿ ಅಡಗಿದೆ. ಈ ಆರು ಸಂಹಿತೆಗಳಾವುವೆಂದರೆ 1) ಸನತ್ಕುಮಾರ ಸಂಹಿತೆ 2) ಸೂತ ಸಂಹಿತೆ 3) ಶಂಕರ ಸಂಹಿತೆ 4) ವೈಷ್ಣವ ಸಂಹಿತೆ 5) ಬ್ರಹ್ಮ ಸಂಹಿತೆ ಮತ್ತು 6) ಸೌರ ಸಂಹಿತೆ.

ಸೂತ ಸಂಹಿತೆಯಲ್ಲಿ ಈ ಕೆಳಗಿನ ಆರು ಸಂಹಿತೆಗಳು ಹೇಳಲ್ಪಟ್ಟಿವೆ :

1) ಸನತ್ಕುಮಾರ ಸಂಹಿತಾಗ್ರಂಥ ಸಂಖ್ಯೆ 36000
2) ಸೂತ ಸಂಹಿತಾ ಗ್ರಂಥ ಸಂಖ್ಯೆ 6000
3) ಶಂಕರ ಸಂಹಿತಾ ಗ್ರಂಥ ಸಂಖ್ಯೆ 30000
4) ವೈಷ್ಣವ ಸಂಹಿತಾ ಗ್ರಂಥ ಸಂಖ್ಯೆ 5000
5) ಬ್ರಹ್ಮ ಸಂಹಿತಾ ಗ್ರಂಥ ಸಂಖ್ಯೆ 3000
6) ಸೌರ ಸಂಹಿತಾ ಗ್ರಂಥ ಸಂಖ್ಯೆ 1000

ಸ್ಕಂದ ಪುರಾಣದ ಪ್ರಭಾಸ ಖಂಡದಂತೆ : ಪೂರ್ವ ಕಾಲದಲ್ಲಿ ಕೈಲಾಸ ಶಿಖರದಲ್ಲಿ ಬ್ರಹ್ಮ ಮೊದಲಾದವರ ಮುಂದೆ ಪಿನಾಕಿಯು ಪಾರ್ವತೀ ದೇವಿಗೆ ಸ್ಕಂದ ಪುರಾಣವನ್ನು ಹೇಳಿದನು. ಪಾರ್ವತಿಯು ಷಣ್ಮುಖನಿಗೆ, ಷಣ್ಮುಖನು ನಂದಿಗೆ, ನಂದಿಯು ಅತ್ರಿ ಕುಮಾರನಿಗೆ, ಅತ್ರಿಕುಮಾರನು ವ್ಯಾಸನಿಗೆ ಮತ್ತು ವ್ಯಾಸನು ಸೂತನಿಗೆ ಹೇಳಿದನು.

ವೇದವ್ಯಾಸಕೃತ ಸ್ಕಂದ ಪುರಾಣವು 7 ಭಾಗಗಳಲ್ಲಿದೆ. ಅದರಲ್ಲಿ ಅಡಕವಾಗಿರುವ ಶ್ಲೋಕಗಳು 81000. ಇದರ ಮೊದಲನೆಯ ಭಾಗವು ಸ್ಕಂದನ ಮಹಿಮೆಗಳಿಂದ ಕೂಡಿ ಕೊಂಡು ಮಾಹೇಶ್ವರ ಖಂಡವೆಂದಾಗಿದೆ. ಎರಡನೆಯದು ವೈಷ್ಣವ ಖಂಡ. ಮೂರನೆಯದು ಚಿಕ್ಕದಾದ ಸೃಷ್ಟಿ ವರ್ಣನೆಯಿಂದ ಕೂಡಿದ ಬ್ರಹ್ಮಖಂಡ, ಕಾಶೀ ಮಾಹಾತ್ಮ್ಯವಿರುವ ಕಾಶೀ ಖಂಡವು ನಾಲ್ಕನೇಯದು. ಉಜ್ಜಯಿನಿಯ ಕಥೆಯಿರುವುದು ಐದನೆಯ ಖಂಡವಾದ ರೇವಾ ಖಂಡದಲ್ಲಿ, ಆರನೇಯದು ಕಲ್ಪಪೂಜೆ, ವಿಶ್ವಕಥೆ ಮತ್ತು ತಾಪೀ ಮಹಾತ್ಮೆಯಿರುವ ತಾಪೀ ಖಂಡ ಮತ್ತು ಏಳನೇ ಪ್ರಭಾಸ ಕಥೆಯಿರುವ ಖಂಡ.

ನಾರದ ಪುರಾಣದ ಸ್ಕಂದೋಪಕ್ರಮಣಿಕೆಯಲ್ಲಿ ಸ್ಕಂದ ಪುರಾಣವು 7 ಖಂಡಗಳಲ್ಲಿದೆ. ಅದರಲ್ಲಿ 81000 ಶ್ಲೋಕಗಳು ಮಾಹೇಶ್ವರ, ವೈಷ್ಣವ, ಬ್ರಹ್ಮ, ಕಾಶೀ, ಅವಂತೀ, ನಾಗರ ಮತ್ತು ಪ್ರಭಾಸ ಖಂಡಗಳು.

ಮೇಲೆ ಹೇಳಿದ ಸಂಹಿತೆಗಳು ಮತ್ತು ಖಂಡಗಳಲ್ಲದೆ ಇತರ ಅನೇಕ ಮಹಾತ್ಮ್ಯ ಮತ್ತು ಖಂಡಗಳು ಸ್ಕಂದ ಪುರಾಣದಲ್ಲಿ ಅಡಗಿದೆ ಎಂದು ಪ್ರಚಲಿತವಿದೆ.

1. ಸಹ್ಯಾದ್ರಿ ಖಂಡ 2. ಅರ್ಬುದಾಚಲ ಖಂಡ 3. ಕನಕಾದ್ರಿ ಖಂಡ 4. ಕಾಶ್ಮೀರ ಖಂಡ 5. ಕೌಶಲ ಖಂಡ 6. ಗಣೇಶ ಖಂಡ 7. ಉತ್ತರ ಖಂಡ 8. ಪುಷ್ಕರ ಖಂಡ 9. ಬದರಿಕಾ ಖಂಡ 10. ಭೀಮ ಖಂಡ 11. ಭೂ ಖಂಡ 12. ಭೈರವ ಖಂಡ 13. ಮಲಯಾಚಲ ಖಂಡ 14. ಮಾನಸ ಖಂಡ 15. ಕಾಲಿಕಾ ಖಂಡ 16. ಶ್ರೀಮೂಲ ಖಂಡ 17. ಪರ್ವತ ಖಂಡ 18. ಸೇತು ಖಂಡ 19. ಹಾಲ್ಯಾಸ ಖಂಡ 20. ಹಿಮವತ್ಖಂಡ 21. ಮಹಾಕಾಳಿ ಖಂಡ, ಅಗಸ್ತ್ಯ ಸಂಹಿತೆ, ಈಶಾನ ಸಂಹಿತೆ, ಉಮಾ ಸಂಹಿತೆ, ಸದಾಶಿವ ಸಂಹಿತೆ, ಪ್ರಲ್ಹಾದ ಸಂಹಿತೆ ಇತ್ಯಾದಿ.

ಟಿಪ್ಪಣಿ : ವೇದವ್ಯಾಸ ಕೃತ ಸ್ಕಂದ ಪುರಾಣದಲ್ಲಿ ಸಹ್ಯಾದ್ರಿ ಖಂಡವೆಂಬುದಿಲ್ಲ ಎಂದು ಮೇಲಿನ ವಿವರದಿಂದ ತಿಳಿಯಬಹುದು. ವಿದ್ವಾಂಸರ ಅಭಿಪ್ರಾಯವೂ ಅದೇ. ಈ ಸಹ್ಯಾದ್ರಿ ಖಂಡವು ಈ ಮಹಾಪುರಾಣಕ್ಕೆ ಕಾಲಾನುಕ್ರಮದಲ್ಲಿ ಸೇರಿಸಲ್ಪಟ್ಟಿರಬೇಕೆಂದೂ ತಿಳಿಯಬಹುದಾಗಿದೆ. ಸ್ಕಂದ ಪುರಾಣವು ಸುದೀರ್ಘವಾದ ಮತ್ತು ಮಹಾತ್ಮೆಗಳನ್ನೊಳಗೊಂಡ ಹಾಗೂ ಸೀಮೆಯಲ್ಲಿ ಸ್ವಲ್ಪ ಅನಿಶ್ಚಿತವಾದ ಪುರಾಣವಾದುದರಿಂದ ಅದಕ್ಕೆ ಬೇಕು ಬೇಕಾದಂತೆ ಅಂಶಾಂಗಗಳನ್ನು ಅವರವರ ಅನುಕೂಲಕ್ಕೆ ಸರಿಯೊಪ್ಪುವಂತೆ, ಸ್ಥೇರಿಸಲು ಕಾರಣವಾಯಿತೆನ್ನಲೂ ಆಸ್ಪದವಿದೆ. ಪುರಾಣ ಕರ್ತರಾದ ಶ್ರೀ ವೇದವ್ಯಾಸರು ಉತ್ತರದೇಶದವರಾಗಿ ತುಳುಭಾಷೆಯ ಅರಿವು ಅವರಿಗಿರಲಾರದು. ಅವರು ರಚಿಸಿದ್ದೆಂದು ನಮ್ಮ ನಾಡಿನವರು ಹೇಳುವ ಸಹ್ಯಾದ್ರಿಯಲ್ಲಿ ಇಲ್ಲಿಯ ಹೊಸ ಬ್ರಾಹ್ಮಣರ ಕುಲಗಳನ್ನು (Totemistic Origin) ಹೇಳುವಾಗ ತುಳು ಶಬ್ದಗಳನ್ನೇ ಉಪಯೋಗಿಸುತ್ತಿದ್ದಿಲ್ಲ. ಇವನ್ನು ಕೂಡ ಸಂಸ್ಕೃತದಲ್ಲಿ ಬರೆಯುತ್ತಿದ್ದರು. ಶ್ರೀ ವ್ಯಾಸರು 18 ಪುರಾಣಗಳಿಗೆ 4 ಲಕ್ಷ ಗ್ರಂಥವೆಂದು ಗೊತ್ತು ಮಾಡಿ ರಚಿಸಿದ ಪ್ರಕಾರ, ಸ್ಕಂದ ಪುರಾಣವನ್ನು ಮಾತ್ರ ಬಿಟ್ಟು, ಬಾಕಿ ಉಳಿದ 17 ಪುರಾಣಗಳ ಗ್ರಂಥ ಸಂಖ್ಯೆಯನ್ನು ಈ ನಮ್ಮ ಸಹ್ಯಾದ್ರಿಯು ಹೇಳುವ ಸ್ಕಂದ ಪುರಾಣದ ಸಂಖ್ಯೆಯನ್ನು ಕೂಡಿಸಿದರೆ ಒಟ್ಟು ಗ್ರಂಥ ಸಂಖ್ಯೆಯು ಜಾಸ್ತಿಯಾಗುವುದು ಕಂಡು ಬಂದಿದೆ. ಆದುದರಿಂದ ವೇದ ವ್ಯಾಸಕೃತ ಸ್ಕಂದ ಪುರಾಣದಲ್ಲಿ ಈ ಸಹ್ಯಾದ್ರಿ ಖಂಡವಿರುವುದಿಲ್ಲ. ಸಹ್ಯಾದ್ರಿ ಖಂಡ ಅಡಗಿರುವ ಸ್ಕಂದ ಪುರಾಣವು 'ಪರಿಶುದ್ಧ'ವಾದುದಲ್ಲ ಎಂದು 1865ನೇ ಇಸವಿಯಲ್ಲಿ 18 ಪುರಾಣಗಳನ್ನು ಛಾಪೆಗೆ ಕೊಡುವ ಮೊದಲು ಅವುಗಳನ್ನು ಶೋಧಿಸುವ ಬಗ್ಗೆ ಕಾಶಿಯಲ್ಲಿ ನೆರೆದ ಘನ ವಿದ್ವಾಂಸರ ಸಭೆಯಲ್ಲಿ ನಿರ್ಧರಿಸಲ್ಪಟ್ಟಿದೆ. ಸಹ್ಯಾದ್ರಿ ಎಂಬುದು ನವೀನ ಕಲ್ಪಾನಾ ಗ್ರಂಥವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

**ಭಟ್ಟಾಚಾರ್ಯರು ಮಾಡಿದ ದ್ವಾತ್ರಿಂಶ ಗ್ರಾಮ ಪದ್ಧತಿ :**

"ಆದಿಯಲ್ಲಿ ಪರಶುರಾಮ ದೇವರು ಪಶ್ಚಿಮಾಂಬುಧಿಯಿಂದ ಭೂಪ್ರದೇಶವನ್ನು ಪಡಕೊಂಡರು. ಅಬ್ರಾಹ್ಮಣ್ಯ ದೇಶವೆಂದು ಮಯೂರವರ್ಮನು ಗೋದಾವರಿ ನದಿತೀರದಿಂದ ಎಂದರೆ ಅಹಿಚ್ಛತ್ರದಿಂದ ಉತ್ತಮರಾದ ಬ್ರಾಹ್ಮಣರನ್ನು ಕರೆತಂದು, ಪರಶುರಾಮ ದೇವರು ಪಡಕೊಂಡ ದೇಶದಲ್ಲಿ ತೌಳವ, ಕೇರಳವೆಂಬ ವಿಭಾಗವನ್ನು ಮಾಡಿ ಆವಾವಾ ದೇಶಗಳಲ್ಲಿಟ್ಟು ಜನರಿಗೆ ಗ್ರಾಮಭೇದ ನಾಮ ಭೇದಗಳನ್ನು ವಿಧಿಸಿ ಆ ಬ್ರಾಹ್ಮಣರಿಗೆ ಸರ್ವ ಮಾನ್ಯವಾಗಿ ಭೂಮಿಯನ್ನು ಧಾರೆ ಎರೆದು ಕೊಟ್ಟನು. ಷಟ್ಕರ್ಮಿಗಳಾದ ಬ್ರಾಹ್ಮಣರು ಅಗ್ನಿಹೋತ್ರ ಮುಂತಾದ ಪಂಚ ಮಹಾ ಯಜ್ಞಗಳನ್ನು ನಡೆಸಿಕೊಂಡು ಬರಬೇಕೆಂಬುದಾಗಿಯೂ ತ್ರಿಕರ್ಮಿಗಳಾದ ಬ್ರಾಹ್ಮಣರು ತಮಗೆಕೊಟ್ಟ ಭೂಮಿ ಮುಂತಾದುವುಗಳನ್ನು ಅನುಭವಿಸಿಕೊಂಡು ರಾಜ್ಯಾರ್ಥವನ್ನು ಅರಸುಗಳಿಗೆ ಕೊಡಬೇಕೆಂಬುದಾಗಿಯೂ, ಇಂತಿಂಥ ಬ್ರಾಹ್ಮಣರುಗಳಿಗೆ ಇಷ್ಟಿಷ್ಟು ಯೋಗ್ಯತೆ ಎಂಬುದಾಗಿ ವಿಧಿಸಿದ ಪ್ರಬಂಧ ರೂಪದಿಂದ ಹೇಳಿದ ಗ್ರಂಥಕ್ಕೆ ಗ್ರಾಮಪದ್ಧತಿಯೆಂದು ಹೆಸರು. ಈ ತುಳುವದಲ್ಲಿ ಖ್ಯಾತಿವೆತ್ತ ಗ್ರಾಮ ಪದ್ಧತಿಯು ಸಹ್ಯಾದ್ರಿ ಖಂಡದ ಭಾಗವೆಂದು ಪರಿಗಣಿಸಲ್ಪಟ್ಟಿದೆ. ಅಥವಾ ಸಹ್ಯಾದ್ರಿ ಖಂಡದಿಂದ ಆಯ್ದುದೆಂದು ತಿಳಿಯಲಪಟ್ಟಿದೆ.

**ಉತ್ತರ ಸಹ್ಯಾದ್ರಿ ಖಂಡ :**

ಉತ್ತರ ಸಹ್ಯಾದ್ರಿ ಖಂಡವು ಪರಶುರಾಮ ಕ್ಷೇತ್ರದ ನಿರ್ಮಾಣದಿಂ ಆರಂಭವಾಗಿ ಮಯೂರವರ್ಮನ ಕಥೆಯನ್ನೊಳಗೊಂಡು ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆತಂದು ವಸತಿ ಮಾಡಿಸಿದ ಕೂಲಂಕುಶ ವಿವರವನ್ನು ಸೇರಿಕೊಂಡಿದೆ. ಅಂತೂ ಪರಶು ಕ್ಷೇತ್ರದ ಬ್ರಾಹ್ಮಣರ ಚರಿತ್ರೆಯನ್ನೊಳಗೊಂಡಿದೆ ಎಂದು ಹೇಳಬಹುದು. ಇದರಲ್ಲಿ 34 ಅಧ್ಯಾಯಗಳಿವೆ. ಈ ಗ್ರಂಥವನ್ನು ಗ್ರಾಮ ನಿರ್ಣಯವೆಂದೂ ಕರೆಯುತ್ತಾರೆ. ವಿಷಯ ನಿರೂಪಣೆಯಲ್ಲಿ ವಸ್ತು ಪ್ರತಿಪಾದನೆಯಲ್ಲಿ ಇವೆರಡು ಗ್ರಂಥಗಳೂ ಒಂದೇ ಆಗಿವೆ. ಆದರೆ ಜಿಲ್ಲೆಯ ಬೇರೆ ಬೇರೆ ಪ್ರದೇಶಗಳಲ್ಲಿ ಸಿಕ್ಕಿದ ಗ್ರಾಮಪದ್ಧತಿ ಪ್ರತಿಗಳಲ್ಲಿ ಶೈಲಿ ಮತ್ತು ವಿಷಯಸಾಮಾಗ್ರಿಗಳ ಕುರಿತಾಗಿ ಸ್ವಲ್ಪ ವ್ಯತ್ಯಾಸ ತೋರಿಬರುತ್ತದೆ.

(ಮುಂದುವರಿಯುವುದು)


ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
ಫೋನ್ : 2454355, ಮೊಬೈಲ್ : 94485 45702


ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ

## ಶುಭಜನನ

ಹಿರಿಯಡ್ಕ ಆಳುಗ್ಗೇಲು ಶಂಕರನಾರಾಯಣ ರಾಯರ ಪುತ್ರ ಸುದರ್ಶನ್ ಹಾಗೂ ಕಬ್ಬಿನಾಲೆ ಸದಾನಂದ ಹೆಬ್ಬಾರರ ಪುತ್ರಿ ರೇಶ್ಮಾ ದಂಪತಿಗಳಿಗೆ ತಾ.06-02-2010ರಂದು ಗಂಡು ಮಗುವಿನ ಜನನ.

## ಗೃಹ ಪ್ರವೇಶ

ಶ್ರೀಮತಿ ಗಾಯತ್ರಿ ಮತ್ತು ಶ್ರೀ ಎಲ್ಲೂರು ಪ್ರಕಾಶ್‌ಕುಮಾರ್ ದಂಪತಿಗಳು ಉಡುಪಿ ಕುಕ್ಕಿಕಟ್ಟೆಯ ವ್ಯವಹಾರ್ ಗಾರ್ಡನ್‌ನಲ್ಲಿ ನೂತನವಾಗಿ ಕಟ್ಟಿಸಿರುವ 'ಪ್ರಾಂಜಲ'ದ ಗೃಹಪ್ರವೇಶವನ್ನು ತಾ.17-2-2010ರಂದು ನೆರವೇರಿಸಿದರು.

★★★★

ಕಬ್ಬಿನಾಲೆ ಕಾಪೋಳಿಯ ಗಾಯತ್ರಿ ಪ್ರಕಾಶ್ ಹೆಬ್ಬಾರರ ನೂತನ ಗೃಹಪ್ರವೇಶ ಮತ್ತು ಅವರ ಪುತ್ರ ಸಿದ್ಧಾರ್ಥನಿಗೆ ಬ್ರಹ್ಮೋಪದೇಶವು ತಾ.29-1-2010 ರಂದು ನೆರವೇರಿತು

## ನಿಧನ

### ಐಎನ್‌ಎ ಯೋಧ ಯು. ಸುಂದರರಾವ್

ಇಂಡಿಯನ್ ನೇಶನಲ್ ಆರ್ಮಿಯ ಸಿಪಾಯಿ ಹಾಗೂ ಹಿರಿಯ ಸ್ವಾತಂತ್ರ್ಯ ಯೋಧ ಯು. ಸುಂದರ್‌ರಾವ್ (87 ವರ್ಷ) ಅವರು ಅಸೌಖ್ಯದಿಂದ ತಾ.25-2-2010ರಂದು ಮಂಗಳೂರಿನ ಬಲ್ಮಠದಲ್ಲಿರುವ ಪುತ್ರಿಯ ಮನೆಯಲ್ಲಿ ನಿಧನ ಹೊಂದಿದರು. ಅವರು ಮೂವರು ಪುತ್ರಿಯರು ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

ಮೂಲತಃ ಬೆಳ್ತಂಗಡಿಯವರಾಗಿದ್ದ ಅವರು ಸುಭಾಶ್ಚಂದ್ರ ಬೋಸ್ ಅವರ ಇಂಡಿಯನ್ ನೇಶನಲ್ ಆರ್ಮಿಗೆ ಸೇರಿ ಅವರ ಜತೆ ಲೆಫ್ಟಿನೆಂಟ್ ಆಗಿ ಕಾರ್ಯನಿರ್ವಹಿಸಿದ್ದರು. ಅವರು ನೇತಾಜಿಯವರ ಆಪ್ತರಾಗಿದ್ದು ಅವರೊಡನೆ ಸಿಂಗಾಪುರ, ಬರ್ಮಾ, ಹಾಂಕಾಂಗ್ ಮುಂತಾದೆಡೆ ಹೋರಾಡಿದ್ದರು. ಅವರು ತಮ್ಮ ಆತ್ಮಕಥನದಲ್ಲಿ ಈ ವಿವರಗಳನ್ನು ದಾಖಲಿಸಿದ್ದಾರೆ.

★★★★

### ಪಂಡಿತ್ ಹೆಚ್. ಚಂದ್ರಶೇಖರ ರಾಯರು

ಬಪ್ಪನಾಡಿನ ಪಂಡಿತ್ ಹೆಚ್. ಚಂದ್ರಶೇಖರ ರಾಯರು (72 ವರ್ಷ) ತಾ.17-2-10 ರಂದು ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು ಸಹೋದರ, ಮಗಳು, ಅಳಿಯ ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

★★★★

### ಗಜಾನನ ನಾರಾಯಣ ಶ್ಯಾನುಭಾಗ

ಭಾರತೀಯ ಅಂಚೆ ಇಲಾಖೆಯ ನಿವೃತ್ತ ಅಧಿಕಾರಿ ಉತ್ತರಕನ್ನಡ ಜಿಲ್ಲೆಯ ಗುಣವಂತೆಯ ಗಜಾನನ ಶ್ಯಾನುಭಾಗರು ತಾ.13-2-2010 ರಂದು ಶನಿವಾರ ಗುಣವಂತೆಯ ಸ್ವಗೃಹದಲ್ಲಿ ತಮ್ಮ 64ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಇವರ ಪತ್ನಿ ಕಳೆದ ಹಲವು ವರ್ಷಗಳ ಹಿಂದೆಯೇ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು, ಸಹೋದರ ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

## ಮೀನ ಮಾಸ ವಿಶೇಷ ದಿನಗಳು

| | |
|---|---|
| 14-03-2010 | ಮೀನ ಸಂಕ್ರಮಣ - ಶಾರದಾ ದೇವಸ್ಥಾನದ ಪ್ರತಿಷ್ಠಾ ಮಹೋತ್ಸವ |
| 15-03-2010 | ಅಮಾವಾಸ್ಯ |
| 18-03-2010 | ಉತ್ತರಭಾದ್ರ, ನಕ್ಷತ್ರಾರಂಭ |
| 26-03-2010 | ಸರ್ವೈಕಾದಶೀ |
| 27-03-2010 | ಪ್ರದೋಷಃ, |
| 30-03-2010 | ಪೂರ್ಣಿಮಾ |
| 02-04-2010 | ಸಂಕಷ್ಟ ಚತುರ್ಥಿ<br>ಚಂದ್ರೋದಯ ರಾತ್ರಿ, ಗಂ.9.58ಕ್ಕೆ |
| 10-04-2010 | ಸರ್ವೈಕಾದಶೀ |
| 11-04-2010 | ಪ್ರದೋಷಃ |
| 14-04-2010 | ಮೇಷ ಸಂಕ್ರಮಣ<br>ಅಮಾವಾಸ್ಯ |

**ಅಭಿನಂದನೆ**

# ಅರಳು ಪ್ರತಿಭೆ - ಪ್ರೀತಿಕಾ ಪಿಲಿಂಜ

- ಕೆ. ವೇಣುಗೋಪಾಲರಾವ್

ದಕ್ಷಿಣ ಕನ್ನಡದ ಪುತ್ತೂರಿನಲ್ಲಿ ವಾಸಿಸುತ್ತಿರುವ ಕೆನರಾ ಬ್ಯಾಂಕ್ ಉದ್ಯೋಗಿ ತುಳಸೀದಾಸ್ ಪಿಲಿಂಜ-ಸಾವಿತ್ರಿ ದಂಪತಿಗಳ ಪುತ್ರಿ ಪ್ರೀತಿಕಾ ಪಿಲಿಂಜ ಕೇರಳದ ತೃಶೂರ್ ಸರಕಾರಿ ಕಾನೂನು ಕಾಲೇಜು ಏರ್ಪಡಿಸಿದ್ದ ಜಸ್ಟೀಸ್ ರಾಮಚಂದ್ರ ಸ್ಮಾರಕ ರಾಷ್ಟ್ರೀಯ ಮಾದರಿ ನ್ಯಾಯಾಲಯ ಸ್ಪರ್ಧೆಯಲ್ಲಿ 'ಭಾರತದ 2ನೇ ಅತ್ಯುತ್ತಮ ಮಹಿಳಾ ವಕೀಲ (ವಿದ್ಯಾರ್ಥಿ)' ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಈ ಸ್ಪರ್ಧೆಯಲ್ಲಿ ಭಾಗವಹಿಸಿದ S.R. ಕಾನೂನು ಕಾಲೇಜು ವಿದ್ಯಾರ್ಥಿಗಳಾದ ಶ್ರೀ ಕೀರ್ತಿ ಮೋಹನ್, ಕು। ಪ್ರೀತಿಕಾ ಪಿಲಿಂಜ ಹಾಗೂ ಕು। ಆ್ಯನ್ ಅಲೆಕ್ಸಾಂಡರ್ ಸ್ಪರ್ಧೆಯ ಎಲ್ಲಾ ಸುತ್ತುಗಳಲ್ಲಿ ತಂಡ ಗರಿಷ್ಠ ಸಾಧನೆ ಮಾಡಲು ಕಾರಣರಾಗಿದ್ದಾರೆ. "ದೇಶದ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿ ರಾಜಕೀಯದ ಸಮಸ್ಯೆಗಳು" ಸ್ಪರ್ಧೆಯ ವಿಷಯವಾಗಿತ್ತು.

ಮಂಗಳೂರಿನ ಎಸ್‌ಡಿಎಮ್ ಕಾನೂನು ಕಾಲೇಜಿನ BA, Law 4ನೇ ವರ್ಷದ ವಿದ್ಯಾರ್ಥಿನಿಯಾಗಿರುವ ಪ್ರೀತಿಕಾ ಪಿಲಿಂಜ 3ನೇ ವರ್ಷದ BA, Law ಪರೀಕ್ಷೆಯಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಪ್ರಥಮ ರ್‍ಯಾಂಕ್ ಪಡೆದು ಉತ್ತೀರ್ಣರಾಗಿದ್ದಾರೆ.



"ಪ್ರತಿಯೊಬ್ಬ ವ್ಯಕ್ತಿಯಲ್ಲೂ ಹುಟ್ಟಿನಿಂದಲೇ ಬಂದ ಒಂದು ಕಲೆ, ಪ್ರತಿಭೆ ಅಥವಾ ಒಂದು ಅಂತಃ ಶಕ್ತಿ ಇರುತ್ತದೆ. ಈ ಸುಪ್ತ ಪ್ರತಿಭೆಯನ್ನು ಹೊರ ತೆಗೆಯಲು ಬೇಕಾದ ಪೂರಕ ವಾತಾವರಣವನ್ನು ಸೃಷ್ಟಿಸುವುದು ಹೆತ್ತವರ ಕರ್ತವ್ಯ. ವಿಜ್ಞಾನ ವಿಷಯದಲ್ಲಿ ಪಿಯುಸಿ ವರೆಗೆ ಕಲಿತು ಶೇ.90 ಅಂಕ ಗಳಿಸಿ ತೇರ್ಗಡೆಯಾದ ಪ್ರೀತಿಕಾ ಸಿಇಟಿ ಯಲ್ಲೂ ಒಳ್ಳೆಯ ರ್‍ಯಾಂಕ್ ಗಳಿಸಿದ್ದರು. IT, BTಯ ಅಲೆ ಬಲವಾಗಿದ್ದ ಆ ದಿನಗಳಲ್ಲಿ ಪ್ರೀತಿಕಾ ಒಲವು ಆ ಕಡೆಗಿರಲಿಲ್ಲ. ನಾವು ಅದನ್ನು ಹೇರಲು ಬಯಸಲಿಲ್ಲ. ಅವಳ ಅಭಿರುಚಿಗೆ ತಕ್ಕಂತೆ ಮುಂದುವರಿಯಲು ಅವಕಾಶ ಮಾಡಿಕೊಟ್ಟೆವು" ಎನ್ನುತ್ತಾರೆ ಪ್ರೀತಿಕಾ ತಂದೆ ತುಲಸೀದಾಸ್.

7ನೇ ತರಗತಿಯಲ್ಲಿ 98% ಅಂಕ ಗಳಿಸಿ "ಉದಯಚಂದ್ರ ಪ್ರತಿಭಾ ಪುರಸ್ಕಾರ" ಪಡೆದಿದ್ದ ಪ್ರೀತಿಕಾ ಪಿಯುಸಿ ನಂತರ ವಿಜ್ಞಾನ ವಿಷಯದಿಂದ ಭಿನ್ನವಾದ ಕಾನೂನು ಶಿಕ್ಷಣ ಕಲಿಯಲು ಮುಂದಾಗಿ ಎಸ್‌ಡಿಎಮ್ ಕಾನೂನು ಕಾಲೇಜು ಸೇರಿದರು. ಕಾನೂನಿನ ಜ್ಞಾನ ಮತ್ತು ನೈಪುಣ್ಯವನ್ನು ಕರಗತ ಮಾಡಿಕೊಂಡು ಸಾಮಾಜಿಕ ಉತ್ಥಾನದೊಂದಿಗೆ ವ್ಯಕ್ತಿತ್ವ ವಿಕಸನವನ್ನು ಸಾಧಿಸುವುದು ಅವರ ಆಶಯವಾಗಿತ್ತು.

BA.LL.Bಯ 5 ಸೆಮಿಸ್ಟರ್‌ಗಳಲ್ಲಿ ಉತ್ತಮ ಅಂಕಗಳಿಸುತ್ತಾ ಕಲಿತು 6ನೇ ಸೆಮಿಸ್ಟರ್‌ನಲ್ಲಿ ಯುನಿವರ್ಸಿಟಿಗೇ ಮೊದಲ ರ್‍ಯಾಂಕ್ ಪಡೆದರು. ಕಾಲೇಜು ಮಟ್ಟದಲ್ಲಿ ನಡೆದ 'ಅಣಕು ನ್ಯಾಯಲಯ' ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು 'Best Lady Advocate' ಎನಿಸಿಕೊಂಡ ಪ್ರೀತಿಕಾ ಬೆಂಗಳೂರು-ಧಾರವಾಡಗಳಲ್ಲಿ ನಡೆದ ಅಂತರ್ ಕಾಲೇಜು ಅಣಕು ನ್ಯಾಯಾಲಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಂಸೆ ಗಳಿಸಿದ್ದಾರೆ.

ಹಲವಾರು ಪ್ರತಿಷ್ಠಿತ ಸಂಸ್ಥೆಗಳು, ಕಾಲೇಜುಗಳು ನಡೆಸಿದ ಪ್ರಬಂಧ ಸ್ಪರ್ಧೆಗಳಲ್ಲಿ (Expression-09 ಇತ್ಯಾದಿ) ಸ್ಪರ್ಧಿಸಿ ಬಹುಮಾನ ಗಳಿಸಿದ ಪ್ರೀತಿಕಾ ತಾಲೂಕು ಮಟ್ಟದಲ್ಲಿ ನಡೆದ ಅನೇಕ ರಸಪ್ರಶ್ನೆ ಸ್ಪರ್ಧೆಗಳಲ್ಲಿ ಬಹುಮಾನಗಳಿಗೆ ಪಾತ್ರರಾಗಿದ್ದಾರೆ. ಅನೇಕ ಲೇಖನಗಳು, ಕವಿತೆಗಳು ಮತ್ತು ಸಣ್ಣ ಕಥೆಗಳನ್ನು ಬರೆದಿರುವ ಅವರು ಭೋಪಾಲ್ ಗ್ಯಾಸ್ ದುರಂತದ ಬಗ್ಗೆ ಬರೆದ ಲೇಖನ ವಿಜಯಕರ್ನಾಟಕ ಪತ್ರಿಕೆಯ ಸಂಪಾದಕೀಯ ಪುಟದಲ್ಲಿ ಪ್ರಕಟವಾಗಿತ್ತು.

ವರ್ಷ 2009-10ರ ಎಸ್.ಡಿ.ಎಮ್. ಕಾಲೇಜು ವಿದ್ಯಾರ್ಥಿ ಕೌನ್ಸಿಲ್‌ನ ಜತೆ ಕಾರ್ಯದರ್ಶಿಯಾಗಿರುವ ಪ್ರೀತಿಕಾ ಪಿಲಿಂಜರವರ ಬಾಳಿನ ಕನಸು ನನಸಾಗಲಿ, ಆಯ್ದುಕೊಂಡ ದಾರಿಯ ನಡಿಗೆ ಸುಗಮವಾಗಿರಲಿ ಎಂದು ಆಶಿಸೋಣ. ಶ್ರೀಶಾರದೆಯ ಅನುಗ್ರಹಿಸಲಿ.

## ವಿಳಾಸ ಬದಲಾವಣೆ

**ಎ. ರಾಘವೇಂದ್ರ ರಾವ್**
ನಂ.106, ಶಾರದಾಕೃಪಾ, ಮಹದೇಶ್ವರ ನಗರ,
1st ಮೈನ್, ವಿಜಯನಗರ 2nd ಸ್ಟೇಜ್,
ಮೈಸೂರು - 570 016.
ಮೊಬೈಲ್ : 9448261658

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

ಡಾ। ವೈ. ಸುದರ್ಶನ ರಾವ್

**ಪ್ರಶ್ನೆ: ಆನೆಕಾಲು ರೋಗ ಹೇಗೆ ಬರುತ್ತದೆ? ವರ್ಷಕ್ಕೊಮ್ಮೆ ಕೊಡುವ ಆನೆಕಾಲು ರೋಗದ ಮಾತ್ರೆ ತೆಗೆದುಕೊಳ್ಳುವುದರಿಂದ ಈ ರೋಗ ಬರದಂತೆ ಮಾಡಬಹುದೇ? ಹಾಗೂ ಈ ಚಿಕಿತ್ಸೆಯ ಅಡ್ಡಪರಿಣಾಮಗಳೇನು?**

**ಉತ್ತರ :** ಆನೆಕಾಲು (Filariasis, elephantiasis) ರೋಗವು ವುಚಿರೇರಿಯಾ ಬಾನ್ಕ್ರಾಫ್ಟಿ (wuchereria bancrofti) ಎಂಬ ಒಂದು ಜಂತುವಿನಿಂದ ಬರುತ್ತದೆ. ಹಾಗೂ ಈ ರೋಗವು ಕ್ಯೂಲೆಕ್ಸ್ ಎಂಬ ಸೊಳ್ಳೆಯ ಕಡಿತದ ಮೂಲಕ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ನಮ್ಮ ದೇಹದಲ್ಲಿ ರಕ್ತ ಪರಿಚಲನೆಗಾಗಿ ಮೂರು ತರಹದ ನಾಳಗಳಿವೆ. ಉದಾಹರಣೆಗಾಗಿ ಕಾಲನ್ನೇ ತೆಗೆದುಕೊಂಡರೆ ಅದಕ್ಕೆ ಹೃದಯದಿಂದ ರಕ್ತ ತರುವ ಅಭಿದಮನಿ (artery)ಗಳು ಒಂದು ಬಗೆಯ ನಾಳವಾದರೆ, ಅಪದಮನಿ (vein)ಯು ರಕ್ತವನ್ನು ಕಾಲಿನಿಂದ ಹೃದಯದ ಕಡೆಗೆ ಒಯ್ಯುತ್ತದೆ. ಅದೇ ರೀತಿ ದುಗ್ಧರಸ ನಾಳ (lympatics)ವು ದುಗ್ಧ ರಸ (lymph)ವೆಂಬ ಅಶುದ್ಧ ರಕ್ತದ ನೀರನ್ನು ಕಾಲಿನಿಂದ ಮೇಲೆ ಸಾಗಿಸಿ ಅಪದಮನಿಯು ಹೃದಯವನ್ನು ತಲುಪುವದಕ್ಕಿಂತ ಸ್ವಲ್ಪ ಮೊದಲು ಅದರೊಡನೆ ಕೂಡಿಕೊಳ್ಳುತ್ತದೆ. ಈ ದುಗ್ಧರಸ ನಾಳವೇ ಆನೆಕಾಲು ರೋಗದ ಜಂತಿನ ಕಾರಸ್ಥಾನ, ಆನೆಕಾಲು ರೋಗದ ಜಂತುವು ಸುಮಾರು 5-6 ವರ್ಷಗಳ ಕಾಲ ಜೀವಂತವಿರುತ್ತದೆ. ದಿನಕಳೆದಂತೆ ಈ ಜಂತಿನಿಂದಾಗಿ ಅದು ಇರುವ ನಾಳದಲ್ಲಿ ದುಗ್ಧರಸವು ಮೇಲ್ಮುಖವಾಗಿ ಹರಿಯಲು ಅಡಚಣೆಯಾಗುವುದರಿಂದ ದುಗ್ಧರಸವು ಕಾಲಿನಲ್ಲೇ ಉಳಿದು ನೀರು ತುಂಬಿ ಬಾತುಕೊಳ್ಳುತ್ತದೆ. ಆ ಸಮಯದಲ್ಲಿ ಚಳಿ ಜ್ವರ ತಲೆ ನೋವು ಹಾಗೂ ತೊಡೆಯ ಸಂಧಿಯಲ್ಲಿ ದುಗ್ಧಗ್ರಂಥಿಯ ಊತ ಇರುತ್ತದೆ. ಆಗ ಆ ಕಾಲು ಆನೆಯ ಕಾಲಿನಂತೆ ದಪ್ಪಗಾಗಿಯೂ, ಅದರ ಚರ್ಮದಂತೆ ಒರಟಾಗಿಯೂ ಕಾಣುವುದರಿಂದ ಅದನ್ನು ಆನೆಕಾಲು ರೋಗವೆಂದು ಕರೆಯುವರು. ಈ ಜಂತುವು ಕಾಲು ಮಾತ್ರವಲ್ಲದೆ ಕೈಗಳು, ವೃಷಣ, ಶಿಶ್ನ, ಕಿಡ್ನಿಗಳ ದುಗ್ಧನಾಳಗಳನ್ನು ಆಕ್ರಮಿಸಿ ಅಲ್ಲೂ ಇದೇ ರೀತಿಯ ಹಾನಿ ಉಂಟು ಮಾಡಬಲ್ಲವು. ದುಗ್ಧ ನಾಳದಲ್ಲಿರುವ ಜಂತುವು ಕಾಲಕಾಲಕ್ಕೆ, ಅದೂ ಮಧ್ಯರಾತ್ರಿ ಸೊಳ್ಳೆ ಕಡಿಯುವ ಸಮಯಕ್ಕೆ ಹೊಂದಿಕೊಂಡೆಂಬಂತೆ, ಒಂದು ಸಲಕ್ಕೆ ನೂರಾರು ಸಂಖ್ಯೆಯಲ್ಲಿ ಮೈಕ್ರೋಫೈಲೇರಿಯೆ (microfilariae) ಎಂಬ ಮರಿಗಳನ್ನು ರಕ್ತಕ್ಕೆ ಬಿಡುತ್ತದೆ. ಈ ಮರಿಯು ಸೊಳ್ಳೆಯು ರೋಗಿಯನ್ನು ಕಚ್ಚಿದಾಗ ಸೊಳ್ಳೆಯ ದೇಹವನ್ನು ಸೇರಿ ಅದರ ದೇಹದಲ್ಲಿ 14 ದಿನಗಳ ಕಾಲ ಬೆಳೆದು ಆ ಮೇಲೆ ಆ ಸೊಳ್ಳೆಯು ಇನ್ನೊಬ್ಬ ಮನುಷ್ಯನನ್ನು ಕಡಿದಾಗ ಅವನ ದೇಹವನ್ನು ಪ್ರವೇಶಿಸಿ, ದುಗ್ಧ ನಾಳವೊಂದರಲ್ಲಿ ಜಂತುವಾಗಿ ಬೆಳೆಯುತ್ತದೆ. ವಿಶೇಷವೆಂದರೆ ತುಂಬಾ ದಿನಗಳಿಂದಲೂ ದುಗ್ಧನಾಳದಲ್ಲಿ ಈ ಜಂತು ಇದ್ದು ಮರಿಗಳನ್ನು ರಕ್ತಕ್ಕೆ ಬಿಡುತ್ತಿದ್ದರೂ, ರಕ್ತ ಪರಿಚಲನೆಗೆ ಸಾಕಷ್ಟು ಅಡೆತಡೆ ಉಂಟಾಗುವವರೆಗೂ ರೋಗಿಯ ಕಾಲು ಬಾತುಕೊಳ್ಳುವುದಿಲ್ಲ ಹಾಗೂ ಅವನ ದೇಹದಲ್ಲಿ ಆನೆಕಾಲಿನ ಜಂತು ಇರುವುದು ಅವನಿಗೂ, ಇತರರಿಗೂ ತಿಳಿದಿರುವುದಿಲ್ಲ. ಆದರೆ ಸೊಳ್ಳೆಗಳು ಮಾತ್ರ ಅವನ ರಕ್ತವನ್ನು ಹೀರಿ ಅದರಲ್ಲಿದ್ದ ಆನೆಕಾಲು ಜಂತಿನ ಮರಿಗಳನ್ನು ಒಬ್ಬರಿಂದೊಬ್ಬರಿಗೆ ಹರಡಿಸುತ್ತಿರುತ್ತವೆ. ಆನೆಕಾಲು ರೋಗದ ಸಾಂದ್ರತೆ ಹೆಚ್ಚಿರುವ ಪ್ರದೇಶದಲ್ಲಿ ಇಂತಹ ರೋಗವಿಲ್ಲದ ರೋಗಿಗಳು ನಮ್ಮ ಸುತ್ತುಮುತ್ತಲೂ ಸುಮಾರು ಮಂದಿ ಇರುತ್ತಾರೆ ಹಾಗೂ ಸ್ವತಃ ನಾವೇ ಅಂಥವರಲ್ಲೊಬ್ಬರಾಗಿರಬಹುದು. ದುರದೃಷ್ಟಕರ ವಿಚಾರವೆಂದರೆ ಆನೆಕಾಲಿನ ಜಂತನ್ನು ಕೊಲ್ಲಬಲ್ಲ ಪರಿಣಾಮಕಾರಿ ಔಷಧ ಇನ್ನೂ ಲಭ್ಯವಿಲ್ಲ. ಆದರೂ ಅದರ ಮರಿಗಳನ್ನು ಕೊಲ್ಲಬಲ್ಲ ಉತ್ತಮ ಔಷಧ ಲಭ್ಯವಿದೆ.

ಇತ್ತೀಚಿನ ವರ್ಷಗಳಲ್ಲಿ ವರ್ಷಕ್ಕೊಮ್ಮೆ, ಊರಿನ ಎಲ್ಲ ಜನರಿಗೂ, ಒಂದೇ ದಿನ ಆನೆಕಾಲು ರೋಗದ ಔಷಧಿಯನ್ನು ತಿನ್ನಿಸುವ ಹೊಸ ಕಾರ್ಯಕ್ರಮವನ್ನು ಸರಕಾರ ನಡೆಸುತ್ತಿದೆ. ವಾಸ್ತವದಲ್ಲಿ ಇದು ಆನೆಕಾಲು ನಿರೋಧಕ ಔಷಧಿಯಲ್ಲ. ಇದು ನಮ್ಮ ರಕ್ತದಲ್ಲಿರಬಹುದಾದ ಆನೆಕಾಲು ರೋಗದ ಜಂತಿನ ಮರಿಗಳನ್ನು ಕೊಲ್ಲುವ ಔಷಧ. ಈ ಔಷಧಿಯನ್ನು ಎಲ್ಲರೂ ಒಂದೇ ದಿನ ಸೇವಿಸುವುದರಿಂದ ಆ ಒಂದು ಪ್ರದೇಶದಲ್ಲಿರುವ ರೋಗಿಗಳ ಹಾಗೂ ರೋಗಿಗಳ ಹಾಗೆ ಕಾಣದೇ ಇರುವ ರೋಗಿಗಳೆಲ್ಲರ ರಕ್ತದಲ್ಲಿರುವ ಮರಿಗಳು ಒಮ್ಮೆಲೇ ನಿರ್ಮೂಲನವಾಗುತ್ತದೆ. ಆಗ ಯಾರನ್ನು ಸೊಳ್ಳೆ ಕಚ್ಚಿದರೂ ಅವರ ರಕ್ತದಲ್ಲಿ ಆನೆಕಾಲು ರೋಗದ ಜಂತಿನ ಮರಿಗಳು ಇಲ್ಲದಿರುವುದರಿಂದ, ಆ ಸೊಳ್ಳೆ ಇನ್ನೊಬ್ಬನನ್ನು ಕಚ್ಚಿದಾಗ ಈ ಖಾಯಿಲೆ ಹರಡುವುದಿಲ್ಲ. ಇದು ಈ ಕಾರ್ಯಕ್ರಮದ ಮುಖ್ಯ ತಿರುಳು. ಈ ಕಾರ್ಯಕ್ರಮವನ್ನು ಪದೇ ಪದೇ ನಡೆಸಿದಂತೆ ಆ ಪ್ರದೇಶದಲ್ಲಿ ನಿಧಾನವಾಗಿ ಈ ರೋಗವು ತಹಬಂದಿಗೆ ಬರುತ್ತದೆ. ಆದರೆ ಈ ಉಪಾಯವು ಫಲಿಸಬೇಕಾದರೆ ಎಲ್ಲರೂ, ಒಂದೇ ದಿನ ಈ ಔಷಧವನ್ನು ಸೇವಿಸಬೇಕಾದ ಅವಶ್ಯಕತೆ ಇದೆ. ಹಾಗಾಗಿ ಇದಕ್ಕೆ ಎಲ್ಲರ ಸಹಕಾರ ಅಗತ್ಯ. ವಯಸ್ಸಿಗನುಗುಣವಾಗಿ ಸೂಚಿಸಿರುವ ಪ್ರಮಾಣದಲ್ಲಿ ಈ ಔಷಧಿಯನ್ನು ಸೇವಿಸಿದರೆ, ಕೆಲವರಲ್ಲಿ ಮಾತ್ರ ತಲೆ ಸುತ್ತು ಬರುವುದು, ವಾಂತಿ, ಹೊಟ್ಟೆ ತೊಳೆಸುವುದೇ ಇತ್ಯಾದಿ ಸಣ್ಣ ಪ್ರಮಾಣದ ಅಡ್ಡಪರಿಣಾಮಗಳುಂಟಾಗಬಹುದೇ ಹೊರತು ಕೆಲವು ಪತ್ರಿಕೆಗಳಲ್ಲಿ ವರದಿಯಾದ ಮಾರಣಾಂತಿಕ ಅಡ್ಡ ಪರಿಣಾಮಗಳು, ಈ ಕಾರ್ಯಕ್ರಮದ ಮಹತ್ವವನ್ನರಿಯದ ಕೆಲವು ವಿಘ್ನ ಸಂತೋಷಿಗಳ ಅಪಪ್ರಚಾರವಲ್ಲದೇ, ಔಷಧಿಯದ್ದಲ್ಲ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

# ಶಾಲಿಪುರ (ಸಾಲ್ಯೂರು) ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ

**ಅಂಚೆ : ಕೊಕ್ರಾಡಿ, ಬೆಳ್ತಂಗಡಿ ತಾಲೂಕು, ದ.ಕ. - 574 242**

**ದೂರವಾಣಿ : 08256-287109**

ಸ್ವಸ್ತಿ! ಶ್ರೀ ವಿಕೃತಿ ನಾಮ ಸಂವತ್ಸರದ ಮೀನ ಮಾಸ ದಿನ ೨೩, ಚೈತ್ರ ಕೃಷ್ಣ ಅಷ್ಟಮಿ ದಿನಾಂಕ 06-04-2010ನೇ ಮಂಗಳವಾರದಿಂದ ದಿನಾಂಕ 11-04-2010ರ ರವಿವಾರದ ತನಕ

**ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಪೂರ್ಣಾನುಗ್ರಹದೊಂದಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದ ರಾಜರ್ಷಿ ಪೂಜ್ಯ ಡಾ| ಡಿ. ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಕೊಕ್ರಾಡಿ ಶಾಲಿಪುರ (ಸಾಲ್ಯೂರು) ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ**

## ನವೀಕರಣ ಹಾಗೂ ಬಿಂಬ ಪುನಃ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶಾಭಿಷೇಕ ಮಹೋತ್ಸವವು

ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವೇದಮೂರ್ತಿ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ವಿವಿಧ ವೈದಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು.

### ವೈದಿಕ ಕಾರ್ಯಕ್ರಮಗಳು

**ದಿನಾಂಕ 06-04-2010ನೇ ಮಂಗಳವಾರ**

ಪೂರ್ವಾಹ್ನ ಗಂಟೆ 9-30ರಿಂದ : ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ.), ಪ್ರಗತಿಬಂಧು ಒಕ್ಕೂಟ, ಕೊಕ್ರಾಡಿ ಇದರ ವತಿಯಿಂದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ

ಸಾಯಂಕಾಲ ಗಂಟೆ 4-00ರಿಂದ : ದೇವಳದ ತಂತ್ರಿಗಳಿಗೆ ಹಾಗೂ ಋತ್ವಿಜರಿಗೆ ಸ್ವಾಗತ, ಪ್ರಾಸಾದ ಪರಿಗ್ರಹ

ಗಂಟೆ 5-00ರಿಂದ : ಹಸಿರುವಾಣಿ ಸಮರ್ಪಣೆ

ಗಂಟೆ 6-00ರಿಂದ : ಶ್ರೀ ದೇವತಾ ಪ್ರಾರ್ಥನೆ, ತೋರಣ ಮುಹೂರ್ತ, ಉಗ್ರಾಣ ಮುಹೂರ್ತ, ಆಚಾರ್ಯಾದಿ ಋತ್ವಿಗ್ವರಣ, ಅರಣಿಮಥನ, ಪ್ರಾಸಾದ ಪರಿಗ್ರಹ, ರಾಕ್ಷೋಘ್ನ ವಾಸ್ತುಹೋಮಾದಿ, ಅಂಕುರಾರೋಪಣ

ರಾತ್ರಿ ಗಂಟೆ 7ರಿಂದ : ಭಜನೆ, ಧಾರ್ಮಿಕ ಸಭಾ ಕಾರ್ಯಕ್ರಮ, ಅನ್ನದಾನ ಮತ್ತು ಸಾಂಸ್ಕತಿಕ ಕಾರ್ಯಕ್ರಮಗಳು

**ದಿನಾಂಕ 07-04-2010ನೇ ಬುಧವಾರ**

ಪೂರ್ವಾಹ್ನ 8ರಿಂದ : ಮಹಾಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ

ಮಧ್ಯಾಹ್ನ 12ರಿಂದ : ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ

ಸಾಯಂಕಾಲ 4ರಿಂದ : ಮಂಟಪ ಪ್ರವೇಶ, ಬಿಂಬ ಶುದ್ಧಿ, ಅಧಿವಾಸ ಹೋಮಗಳು

ಸಾಯಂಕಾಲ 5ರಿಂದ : ಭಜನೆ, ಧಾರ್ಮಿಕ ಸಭಾ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು

**ದಿನಾಂಕ 08-04-2010ನೇ ಗುರುವಾರ**

ಪೂರ್ವಾಹ್ನ ಗಂಟೆ 8-59ರ ವೃಷಭ ಲಗ್ನ ಸುಮುಹೂರ್ತದಲ್ಲಿ

**ಶ್ರೀ ಸುಬ್ರಹ್ಮಣ್ಯ ದೇವರ ಬಿಂಬ ಪುನಃ ಪ್ರತಿಷ್ಠೆ, ಶಾಂತಿ ಹೋಮ**

ಮಧ್ಯಾಹ್ನ 12ರಿಂದ : ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ

ಸಂಜೆ 4-30ರಿಂದ : ಗಣಪತಿ, ಕೊಡಮಣಿತ್ತಾಯ, ಅಣ್ಣಪ್ಪ ಪಂಜುರ್ಲಿ ದೈವಗಳಿಗೆ ಕಲಶಾಧಿವಾಸ, ಕಲಶ ಪ್ರತಿಷ್ಠೆ, ಅಧಿವಾಸ ಹೋಮಗಳು

ಸಾಯಂಕಾಲ 5ರಿಂದ : ಭಜನೆ, ಧಾರ್ಮಿಕ ಸಭಾಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು

**ದಿನಾಂಕ 09-04-2010ನೇ ಶುಕ್ರವಾರ**

ಪೂರ್ವಾಹ್ನ ಗಂಟೆ 8-30ರ ವೃಷಭ ಲಗ್ನ ಸುಮುಹೂರ್ತದಲ್ಲಿ **ಶ್ರೀ ಗಣಪತಿ ದೇವರ ಪ್ರತಿಷ್ಠೆ, ಕಲಶಾಭಿಷೇಕ, ವಾಹನ ಪ್ರತಿಷ್ಠೆ, ಶಿಖರ ಕಲಶ ಪ್ರತಿಷ್ಠೆ, ದೈವಗಳ ಪ್ರತಿಷ್ಠೆ, ಹೋಮ**

ಮಧ್ಯಾಹ್ನ 12ರಿಂದ : ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ

ಸಾಯಂಕಾಲ 5ರಿಂದ : ಭಜನೆ

ರಾತ್ರಿ ಗಂಟೆ 7ರಿಂದ : ಧಾರ್ಮಿಕ ಸಭಾ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು

**ದಿನಾಂಕ 10-04-2010ನೇ ಶನಿವಾರ**

ಪೂರ್ವಾಹ್ನ 9-30 : ಪ್ರಾಯಶ್ಚಿತ್ತ ಹೋಮ, ಪರಿವಾರ ಪ್ರತಿಷ್ಠೆ

ಮಧ್ಯಾಹ್ನ 12ರಿಂದ : ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ

ಸಾಯಂಕಾಲ 5ರಿಂದ : ಮಂಡಲರಚನೆ, ಬ್ರಹ್ಮಕಲಶ ಪ್ರತಿಷ್ಠೆ, ಅಧಿವಾಸ ಹೋಮಗಳು

ಸಾಯಂಕಾಲ 5-30 : ಭಜನೆ, ಧಾರ್ಮಿಕ ಸಭಾ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು

**ದಿನಾಂಕ 11-04-2010ನೇ ಆದಿತ್ಯವಾರ**

ಪೂರ್ವಾಹ್ನ ಗಂಟೆ 9-20ರ ವೃಷಭ ಲಗ್ನ ಸುಮುಹೂರ್ತದಲ್ಲಿ **ಬ್ರಹ್ಮಕಲಶಾಭಿಷೇಕ, ಪ್ರಸನ್ನ ಪೂಜೆ, ಪಲ್ಲಪೂಜೆ, ಉತ್ಸವ ಬಲಿ, ಬಟ್ಟಲು ಕಾಣಿಕೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ**

ರಾತ್ರಿ 7-30ರಿಂದ : ಮಹಾರಂಗಪೂಜೆ, ಉತ್ಸವ ಬಲಿ, ಮಹಾಮಂತ್ರಾಕ್ಷತೆ, ಪ್ರಸಾದ ವಿತರಣೆ

ಸಾಯಂಕಾಲ 5ರಿಂದ : ಭಜನೆ, ಧಾರ್ಮಿಕ ಸಭಾ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು

### ಕಲಶ ಸೇವೆ

| | | | |
|---|---|---|---|
| ರಜತ ಕಲಶ | ರೂ.10,000.00 | ತಾಮ್ರದ ದೊಡ್ಡ ಕಲಶ | ರೂ.1,000.00 |
| ತಾಮ್ರದ ಕಲಶ | ರೂ.500.00 | ತಾಮ್ರದ ಸಣ್ಣ ಕಲಶ | ರೂ.250.00 |

**ಹಸಿರು ಹೊರೆಕಾಣಿಕೆ ಮೆರವಣಿಗೆಯೊಂದಿಗೆ ಸಮರ್ಪಣೆ :**

ದಿನಾಂಕ 06-04-2010ನೇ ಮಂಗಳವಾರ — ಬೆಳಿಗ್ಗೆ ಗಂಟೆ 8-30ಕ್ಕೆ ಕೊಕ್ರಾಡಿ ಗ್ರಾಮಸ್ಥರಿಂದ

ದಿನಾಂಕ 07-04-2010ನೇ ಬುಧವಾರ — ಬೆಳಿಗ್ಗೆ ಗಂಟೆ 9-00ರಿಂದ : ಸುಳ್ಕೇರಿ, ಕುತ್ಲೂರು, ನಾರಾವಿ ಗ್ರಾಮಸ್ಥರಿಂದ ಮತ್ತು ಇತರ ಗ್ರಾಮಸ್ಥರಿಂದ

ದಿನಾಂಕ 08-04-2010ನೇ ಗುರುವಾರ — ಬೆಳಿಗ್ಗೆ ಗಂಟೆ 9-00ರಿಂದ ಸಾವ್ಯ, ಅಂಡಿಂಜೆ, ಕುದ್ಯಾಡಿ, ಪೆರಾಡಿ ಗ್ರಾಮಸ್ಥರಿಂದ

ದಿನಾಂಕ 09-04-2010ನೇ ಶುಕ್ರವಾರ — ಬೆಳಿಗ್ಗೆ ಗಂಟೆ 10-00ಕ್ಕೆ : ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಭಾ (ರಿ.), ಬೆಳ್ತಂಗಡಿ ಇದರ ವತಿಯಿಂದ

*ಈ ಪುಣ್ಯ ಕಾರ್ಯದಲ್ಲಿ ತಾವು ತಮ್ಮನ್ನು ತೊಡಗಿಸಿಕೊಂಡು ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.*

**ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸರ್ವಸದಸ್ಯರು,
ಜೀರ್ಣೋದ್ಧಾರ ಸಮಿತಿಯ ಸರ್ವಸದಸ್ಯರು, ಬ್ರಹ್ಮಕಲಶೋತ್ಸವ ಸಮಿತಿಯ ಸರ್ವಸದಸ್ಯರು**

# ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

## ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 8-00 ಗಂಟೆಗೆ

ಪ್ರತಿ ಬುಧವಾರ : **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವೇದಿಕೆಯಿಂದ)

ಪ್ರತಿ ಶುಕ್ರವಾರ : **''ಭಜನೆ''** ಸಂಜೆ 5-00 ಗಂಟೆಯಿಂದ (ಮಹಿಳಾ ವೇದಿಕೆಯಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-00ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.02-04-2010) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.10-04-2010 ''ಗಮಕವಾಚನ'' ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ಶುದ್ಧ ಪಂಚಮಿಯಂದು (ತಾ.20-03-2010) ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

# ವೈದ್ಯಕೀಯ ನೆರವು ವೇದಿಕೆ

**ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾ ನಗರ, ಕುಂಜಿಬೆಟ್ಟು , ಉಡುಪಿ**

ನೆರವಿನ ಅಗತ್ಯವುಳ್ಳ ನಮ್ಮ ಸಮಾಜ ಬಾಂಧವರು ಅರ್ಜಿ ಕಳುಹಿಸಬೇಕಾದ ವಿಳಾಸ : ಕಾರ್ಯದರ್ಶಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-576102.

ವೈದ್ಯಕೀಯ ನೆರವು ವೇದಿಕೆಯ ಮಹದುದ್ದೇಶದ ಯೋಜನೆಯನ್ನು ಯಶಸ್ವಿಯಾಗಿಯೂ, ನಿರಂತರವಾಗಿಯೂ ನಡೆಸುವಂತಾಗಲು ಸಮಾಜ ಬಾಂಧವರು ದೇಣಿಗೆಗಳನ್ನು ''ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು ಉಳಿತಾಯ ಖಾತೆ ನಂ.220/2928 ಸಿಂಡಿಕೇಟ್ ಬ್ಯಾಂಕ್, ರಥಬೀದಿ ಬ್ರಾಂಚ್'' ಈ ಹೆಸರಿನಲ್ಲಿ ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಕಾರ್ಯದರ್ಶಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-576 102 : ಈ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು ಮತ್ತು ಸಂಚಾಲಕರು, ವೈದ್ಯಕೀಯ ನೆರವು ವೇದಿಕೆ**

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ), ಕುಂಜಿಬೆಟ್ಟು, ಉಡುಪಿ - 2.



ನಮ್ಮ ಸಂಘದ ಆಶ್ರಯದಲ್ಲಿ

## ಶ್ರೀ ಶಂಕರಜಯಂತಿ ಕಾರ್ಯಕ್ರಮವು

**ತಾ.19-05-2010 ಬುಧವಾರದಂದು ನಡೆಯಲಿದೆ.**

**ಇದೇ ದಿನ ಸಾಮೂಹಿಕ ಉಪನಯನ**

**ನೆರವೇರಲಿದೆ ಹಾಗೂ ಶ್ರೀಶಾರದಾ ಮಂದಿರದಲ್ಲಿ ವಿಶೇಷ ಪೂಜೆಯೂ ಜರಗಲಿದೆ.**

**ಸರ್ವರಿಗೂ ಆದರದ ಸ್ವಾಗತ :**

**- ಕಾರ್ಯದರ್ಶಿ**

ಆಸಕ್ತ ಸಮಾಜ ಬಾಂಧವರು ಇದರಲ್ಲಿ ಪಾಲ್ಗೊಳ್ಳಲಿರುವ ವಟುಗಳ ವಿವರಗಳನ್ನು ತಾ.12-05-2010ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್‌ರಿಗೆ ತಿಳಿಸಲು ಕೋರಲಾಗಿದೆ.

Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org